ಹಿರೇಮಠ ಸಂಸ್ಥಾನ ಭಾಲ್ಕಿಯ ಪೂಜ್ಯ ಶ್ರೀ ಗುರುಬಸವದೇವರ
ಸ್ಥಿರ ಚರ ಪಟ್ಟಾಧಿಕಾರ ಮಹೋತ್ಸವದ ಸವಿ ನೆನಪಿನ ಕೃತಿ

ಗುರುಮುಟ್ಟಿ ಗುರುವಾದವರು

ಪೂಜ್ಯಶ್ರೀ ಗುರುಬಸವದೇವರು

(ಭಾಲ್ಕಿ ಹಿರೇಮಠ ಸಂಸ್ಥಾನದ
ಸಾಂಸ್ಕೃತಿಕ ಪರಂಪರೆ)

ಡಾ. ಬಸವರಾಜ ಬಲ್ಲೂರ

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು,
ಬೀದರ

ಸಮರ್ಥ ಉತ್ತರಾಧಿಕಾರಿ

ಭಾಲ್ಕಿ ಹಿರೇಮಠ ಸಂಸ್ಥಾನಕ್ಕೆ ಪೂಜ್ಯ ಗುರುಬಸವ ದೇವರು ಉತ್ತರಾಧಿಕಾರಿಯಾಗಿ ನೇಮಕವಾಗಿದ್ದು ಭಾಲ್ಕಿ ಮಠದ ಮತ್ತುಭಾಲ್ಕಿ ಸದ್ಭಕ್ತರ ಸೌಭಾಗ್ಯವಾಗಿದೆ.ಇಂತಹ ಸಮರ್ಥ ಉತ್ತರಾಧಿಕಾರಿ ಸಿಕ್ಕಿರುವುದು ಭಾಲ್ಕಿಯ ಮಠದ ಪರಮ ಪುಣ್ಯವಾಗಿದೆ.

ಗುರುಬಸವದೇವರು ಅನುಭವದ ಖಣಿಯಾಗಿದ್ದಾರೆ.ಅತೀಸಣ್ಣವಯಸ್ಸಿನಲ್ಲಿ ಶ್ರೀಮಠಕ್ಕೆ ಬಂದು ವಿದ್ಯಾಭ್ಯಾಸಮಾಡಿ ಸುಮಾರು20 ವರ್ಷಗಳ ವರೆಗೆ ಮಠದ ಸೇವಾಕಾರ್ಯದಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡವರು.ಅಧ್ಯಾತ್ಮ ಮತ್ತು ಆಡಳಿತದ ಸಂಪೂರ್ಣ ಅನುಭವ ಹೊಂದಿದ್ದು ಈ ಸಮಾಜದಪುಣ್ಯವಾಗಿದೆ.

ಅತ್ಯಂತ ಕ್ರೀಯಾಶೀಲ ವ್ಯಕ್ತಿತ್ವವುಳ್ಳುವರು ಶ್ರೀಮಠದ ಪ್ರತಿಯೊಂದು ನೂತನ ಯೋಜನೆಗಳು ಗುರುಬಸವ ದೇವರ ಚಿಂತನದ ಫಲಗಳು.ಬೃಹದಾಕಾರವಾಗಿ ಬೆಳೆದು ನಿಂತ ಶಿಕ್ಷಣ ಸಂಸ್ಥೆಗಳ ಅಭಿವೃದ್ಧಿಗೆ,ಆಂಧ್ರ ಮಹಾರಾಷ್ಟ್ರಗಳಲ್ಲಿಬಸವಾದಿ ಶರಣರ ತತ್ವಗಳನ್ನು ಮನೆಮನೆಗೆ ಮುಟ್ಟಿಸುವಕಾರ್ಯದಲ್ಲಿ ಗುರುಬಸವ ದೇವರ ಪಾತ್ರ ಅತ್ಯಂತ ದೊಡ್ಡದಾಗಿದೆ.ಪರಮ ಪೂಜ್ಯಹಿರಿಯ ಗುರುಗಳಾದಡಾ.ಬಸವಲಿಂಗ ಪಟ್ಟದ್ದೇವರ ಆರೋಗ್ಯ ಮತ್ತು ಆರೈಕೆಯನ್ನು ಅತ್ಯಂತ ಭಕ್ತಿಯುತವಾಗಿ ಮಾಡುತ್ತಿರುವುದು ಅವರ ವ್ಯಕ್ತಿತ್ವಕ್ಕೆಹಿಡಿದ ಕೈಗನ್ನಡಿಯಾಗಿದೆ.

ದಾಸೋಹಮೂರ್ತಿಗಳಾದ ಪೂಜ್ಯ ಗುರುಬಸವ ದೇವರು ಶ್ರೀಮಠಕ್ಕೆ ಬಂದ ಭಕ್ತರಿಗೆ ತಾಯಿಸ್ವರೂಪದಲ್ಲಿನಿಂತು ಪ್ರಸಾದಮಾಡಿಸಿಅವರಯೋಗಕ್ಷೇಮವನ್ನು ವಿಚಾರಿಸುವಲ್ಲಿಭಕ್ತರಮನ ಪುಳಕಿತವಾಗುತ್ತದೆ.

ಅಂತಹ ವಿಶಿಷ್ಟಶ್ರೇಷ್ಠ ಮತ್ತು ಆಧ್ಯಾತ್ಮೀಕ ಚಿಂತನೆಯುಳ್ಳ ಕ್ರಿಯಾಶೀಲ ವ್ಯಕ್ತಿತ್ವವುಳ್ಳ ಅಪ್ಪಟ ಬಸವತತ್ವನಿಷ್ಠ ಪೂಜ್ಯ ಗುರುಬಸವ ದೇವರು ಈ ನಾಡಿನ ಸೌಭಾಗ್ಯವಾಗಿದ್ದಾರೆ.

ಪೂಜ್ಯ ಶ್ರೀ ಮ.ನಿ. ಪ್ರ. ಡಾ. ಮಹಾಂತ ಸ್ವಾಮಿಗಳವರು
ಪೂಜ್ಯ ಶ್ರೀ ಮ.ನಿ. ಪ್ರ.ಗುರು ಮಹಾಂತ ಸ್ವಾಮಿಗಳವರು
ಶ್ರೀ ವಿಜಯ ಮಹಾಂತೇಶ ಸಂಸ್ಥಾನ ಮಠ, ಇಲಕಲ್ಲ

(ಹಿರೇಮಠ ಸಂಸ್ಥಾನ ಭಾಲ್ಕಿಯ ಪೂಜ್ಯ ಶ್ರೀ ಗುರುಬಸವದೇವರ
ಸ್ಥಿರ - ಚರ ಪಟ್ಟಾಧಿಕಾರ ಮಹೋತ್ಸವದ ಸವಿ ನೆನಪಿನ ಕೃತಿ)

ಗುರು ಮುಟ್ಟಿ ಗುರುವಾದವರು

ಪೂಜ್ಯ ಶ್ರೀ ಗುರುಬಸವ ದೇವರು

(ಭಾಲ್ಕಿ ಹಿರೇಮಠ ಸಂಸ್ಥಾನದ ಸಾಂಸ್ಕೃತಿಕ ಪರಂಪರೆ)

ಡಾ. ಬಸವರಾಜ ಬಲ್ಲೂರ

ಉಪನ್ಯಾಸಕ ಕರ್ನಾಟಕ ಪ.ಪೂ, ಕಾಲೇಜು, ಬೀದರ

#09738418468 ಇ-ವಿಳಾಸ: basavaballur@gmail.com

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೀದರ

೨೦೧೬

ಪ್ರಕಾಶಕರು	:	ಸುರೇಶ ಚನ್ನಶೆಟ್ಟಿ ಅಧ್ಯಕ್ಷರು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೀದರ. 9986792323
ಪ್ರಕಟಣೆ	:	22-04-2016
ಪ್ರತಿಗಳು	:	1000
ಪುಟ	:	24
ಬಳಸಿದ ಕಾಗದ	:	90 ಜಿ.ಎಸ್.ಎಮ್. ಆರ್ಟ್ ಪೇಪರ್
ಹಕ್ಕುಗಳು	:	ಲೇಖಕರದ್ದು
ಮುದ್ರಕರು	:	ಅಕ್ಷಯ ಗ್ರಾಫೀಕ್ಸ, ಬೀದರ

ಪುಸ್ತಕ ದಾಸೋಹಿಗಳು : ಶರಣೆ ಆಶಾ ಶರಣ ಮಹೇಶ ಘಾಳೆ, ಬೀದರ
ಶರಣೆ ಚಂದ್ರಮ್ಮಾ ಲಿಂ. ಶರಣ ವೈಜಿನಾಥ ಘಾಳೆ, ಚಿಮ್ಮೆಗಾಂವ ಇವರ ಸ್ಮರಣಾರ್ಥ

ಶ್ರೀಮಠದ ಭವಿಷ್ಯದ ಆಶಾಜ್ಯೋತಿ

ಭಾಲ್ಕಿ ಹಿರೇಮಠ ಸಂಸ್ಥಾನದ ಉತ್ತರಾಧಿಕಾರಿಗಳಾಗಿರುವ ಪೂಜ್ಯ ಶ್ರೀ ಗುರುಬಸವದೇವರು, ನಯ ವಿನಯ ಸಂಪನ್ನರು. ಶಿಸ್ತು ಸೌಜನ್ಯದ ಮೂರ್ತಿಗಳು. ಗುರುಸೇವೆಯನ್ನು ತ್ರಿಕರಣಪೂರ್ವಕ ಮಾಡುತ್ತ ಗುರು ಕೃಪೆಗೆ ಪಾತ್ರರಾದವರು. ಮೂಕನು ಮಾತನಾಡುತ್ತಾನೆ, ಹೆಳವನು ಪರ್ವತಾರೋಹಣ ಮಾಡುತ್ತಾನೆಂದು ಅನುಭಾವಿಗಳು ಹೇಳಿರುವುದನ್ನು ಕೇಳಿದ್ದೇವೆ. ಆದರೆ ಆ ಮಾತಿಗೆ ಪ್ರತ್ಯಕ್ಷ ನಿದರ್ಶನವಾದವರು ಪೂಜ್ಯ ಶ್ರೀ ಗುರುಬಸವದೇವರು. ಗುರು ಕೃಪೆಯಿಂದಲೆ ಅವರು ಎಲ್ಲವನ್ನೂ ಸಾಧಿಸಿದ್ದಾರೆ. ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರ ಜ್ಞಾನ ಶಕ್ತಿಗೆ ಕ್ರಿಯಾ ಶಕ್ತಿಯಾಗಿ ಶ್ರೀಮಠದ ಬೆಳವಣಿಗೆಗೆ ಕಾರಣಕರ್ತರಾಗಿದ್ದಾರೆ. ಲೋಕಜ್ಞಾನ, ವ್ಯವಹಾರ ಕೌಶಲ್ಯತೆ ಹೊಂದಿರುವ ಅವರು ಶ್ರೀಮಠದ ಭವಿಷ್ಯದ ಆಶಾಜ್ಯೋತಿಯಾಗಿದ್ದಾರೆ. ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು ನಿರ್ಮಿಸಿದ ಭವ್ಯ ಭವನಕ್ಕೆ ಸುವರ್ಣ ಕಳಶವನ್ನಿಡುವ ಅತುಲ ಸಾಮರ್ಥ್ಯ ಹೊಂದಿದ್ದಾರೆ. ಎಷ್ಟಾದರೂ ಅವರು ಜ್ಯೋತಿ ಮುಟ್ಟಿದ ಜ್ಯೋತಿಯಲ್ಲವೆ?

ಪೂಜ್ಯ ಶ್ರೀ ಡಾ. ಸಿದ್ಧರಾಮ ಸ್ವಾಮಿಗಳು
ನಾಗನೂರು ರುದ್ರಾಕ್ಷಿಮಠ ಬೆಳಗಾವಿ



ಜ್ಯೋತಿಯ ಮುಟ್ಟಿದ ಬತ್ತಿಯೆಲ್ಲ ಜ್ಯೋತಿಯಪ್ಪವಯ್ಯ
ಸಾಗರವ ಮುಟ್ಟಿದ ನದಿಗಳೆಲ್ಲ ಸಾಗರವಪ್ಪವಯ್ಯ
ಪ್ರಸಾದವ ಮುಟ್ಟಿದ ಪದಾರ್ಥವೆಲ್ಲ ಪ್ರಸಾದವಪ್ಪವಯ್ಯ
ಲಿಂಗವ ಮುಟ್ಟಿದ ಅಂಗವೆಲ್ಲ ಲಿಂಗವಪ್ಪವಯ್ಯಾ
ಸಕಲೇಶ್ವರ ದೇವ ನಿಮ್ಮಮುಟ್ಟಿದವರೆಲ್ಲ ನಿಮ್ಮಂತಪ್ಪರಯ್ಯ

- ಸಕಲೇಶ ಮಾದರಸ

ಜ್ಯೋತಿ ಮುಟ್ಟಿದ ಬತ್ತಿ ಜ್ಯೋತಿಯಾದಂತೆ, ಲಿಂಗಮುಟ್ಟಿದ ಅಂಗ ಲಿಂಗವಾದಂತೆ, ಗುರುಮುಟ್ಟಿದ ಶಿಷ್ಯ ಗುರುವಾಗುವುದು ಜಗತ್ತಿನ ಯಾವ ಧರ್ಮ ದರ್ಶನಗಳಲ್ಲಿ ಅಸಾಧ್ಯವಾದರೂ ಬಸವಾದಿ ಶರಣರಲ್ಲಿ ಮಾತ್ರ ಸಾಧ್ಯ. ಆ ಶರಣ ಪರಂಪರೆಯ ಮುಂದುವರಿಕೆಯಾಗಿ ಭಾಲ್ಕಿ ಹಿರೇಮಠ ಸಂಸ್ಥಾನದ ಗುರು-ಶಿಷ್ಯ ಪರಂಪರೆಯ ಶಿಷ್ಯ ಗುರುವಾಗುವ ಪರಿ ನಿರಂತರ ಎಂಬುದಕ್ಕೆ ಪೂಜ್ಯ ಶ್ರೀ ಡಾ. ಚನ್ನಬಸವ ಪಟ್ಟದ್ದೇವರು, ಪೂಜ್ಯಶ್ರೀ ಡಾ|| ಬಸವಲಿಂಗ ಪಟ್ಟದ್ದೇವರು ಗುರು ಮುಟ್ಟಿ ಗುರುವಾದಂತೆ ಇದೀಗ ಪೂಜ್ಯ ಶ್ರೀ ಗುರುಬಸವ ದೇವರು ಭಾಲ್ಕಿ ಹಿರೇಮಠ ಸಂಸ್ಥಾನಕ್ಕೆ ಪಟ್ಟದ್ದೇವರಾಗುವ ಮೂಲಕ ಬಸವತತ್ವದ ಸಿದ್ಧಾಂತವನ್ನು ಅನುಚಾನವಾಗಿ ಆಚರಣೆಗೆ ತಂದಂತಾಗುತ್ತಿದೆ.

ಹಿರೇಮಠ ಸಂಸ್ಥಾನ ಭಾಲ್ಕಿ

ಕರ್ನಾಟಕದ ಶಿಖರಪ್ರಾಯವಾದ ಬೀದರ ಜಿಲ್ಲೆಯ ಭಾಲ್ಕಿ ಹಿರೇಮಠ ಸಂಸ್ಥಾನವು ನಾಡಿನ ಕೆಲವೇ ಕೆಲವು ವೈಚಾರಿಕ ಮಠಗಳಲ್ಲಿ ಒಂದಾಗಿದೆ. ಮಠಗಳಿಗೆ ಹಿರಿಯ ಮಠವಾಗಿದೆ. ಮಠದ ಪರಿಕಲ್ಪನೆ ಪುರಾತನವಾದರೂ, ಮಠಗಳ ಆಚರಣೆ ಸನಾತನವಾದರೂ ಮಠಗಳ ಧರ್ಮ ಮನುಧರ್ಮವಾದರೂ ಭಾಲ್ಕಿ ಹಿರೇಮಠ ಸಂಸ್ಥಾನ ಹಳೆ ಮಠವಾದರೂ ಆಚರಣೆ ನೂತನವಾಗಿವೆ. ಹಿರೇಮಠದ ಧರ್ಮ ಬಸವಧರ್ಮವಾಗಿದೆ. ಶ್ರೀಮಠದ ಮೂಲಕವೇ ಮಠದ ಸ್ಥಾಪಿತ, ಸನಾತನ ಸಿದ್ಧಚೌಕಟ್ಟುಗಳನ್ನು ಮುರಿದು ಮಠದೊಳಗೆ ದೀನದಲಿತರಿಗೆ ಅವಕಾಶ ನೀಡಿದ್ದು, ಜಾತಿವರ್ಗ ವರ್ಣ ಭೇದವೆಣಿಸದೆ ಸರ್ವರೂ ಸಮಾನರು ಎಂದು ಹೇಳುತ್ತ ಬಸವಾದಿ ಶರಣರಂತೆ ನುಡಿಯನ್ನು ನಡೆಯಲ್ಲಿ ಪೂರೈಸಿರುವ ಭಾಲ್ಕಿ ಹಿರೇಮಠ ಸಂಸ್ಥಾನ ವಿಚಾರ ಸ್ವಾತಂತ್ರ್ಯದ ಮಠ, ಬಡವರ ಮಠ, ದೀನದಲಿತರ ಮಠ, ಕನ್ನಡತ್ವದ ವಿಕಾಸವೇ ಬಸವತತ್ವದ ವಿಕಾಸವೆಂದರಿತ ಕನ್ನಡದ ಮಠ. ಸಾಮಾಜಿಕ ಸಮತೆ, ಧರ್ಮಸಹಿಷ್ಣುತೆಯ ಮಠ. ಸಾಮಾಜಿಕ ಅನಿಷ್ಟತೆಯ ವಿರುದ್ಧ ಹೋರಾಡುತ್ತಿರುವ ಜೀವಕೇಂದ್ರಿತ ವಿಚಾರವಾದದ ಮಠ. ಅನ್ನದಾಸೋಹ, ಜ್ಞಾನದಾಸೋಹ, ಅಕ್ಷರದಾಸೋಹಗಳ ಮೂಲಕ ನಾಡಿನ ಜನತೆಯ ಬದುಕು ಕಟ್ಟುತ್ತಿರುವ ಜನತೆಯ ಮಠ. ಖ್ಯಾತ ಸಂಶೋಧಕರಾದ ಡಾ. ಎಂ.ಎಂ. ಕಲಬುರ್ಗಿಯವರು ''ನಾಡಿನ ಗುರು ಸ್ಥಲದ ಮಠಗಳಿಗೆ ಭಾಲ್ಕಿ ಹಿರೇಮಠ ಮಾದರಿ'' ಎಂದು ಉಲ್ಲೇಖಿಸಿರುವುದು ಅಕ್ಷರಶಃ ಔಚಿತ್ಯವಾಗಿದೆ.

ಕಾಯಕ ಪರಿಣಾಮಿ :

ಪೂಜ್ಯ ಶ್ರೀ ಡಾ॥ ಚನ್ನಬಸವ ಪಟ್ಟದ್ದೇವರು

ಭಾಲ್ಕಿ ಹಿರೇಮಠ ಸಂಸ್ಥಾನಕ್ಕೆ ಸುಮಾರು ಒಂದು ಸಾವಿರ ವರ್ಷಗಳ ಇತಿಹಾಸ ಇರಬಹುದು. ಆದರೆ ಅದು ಜನಪರ, ಜನಪ್ರಿಯವಾದದ್ದು ಶತಾಯುಷಿ ಪೂಜ್ಯ ಶ್ರೀ ಡಾ. ಚನ್ನಬಸವ ಪಟ್ಟದ್ದೇವರ (ಪಟ್ಟಾಧಿಕಾರ 1924)ಕಾಲಕ್ಕೆ. ನಡೆದಾಡುವ ದೇವರಾಗಿದ್ದ ಪೂಜ್ಯ ಶ್ರೀ ಡಾ. ಚನ್ನಬಸವ ಪಟ್ಟದ್ದೇವರಿಗೆ ಕನ್ನಡತ್ವ ಬಸವತತ್ವ ಉಭಯ ದೃಷ್ಟಿ ಏಕವಾಗಿ ಕಾಣುವಂತೆ ಅಭೇದವಾಗಿ ಕಂಡವರು. ಕೆಳವರ್ಗದವರಿಗೆ, ದಲಿತರಿಗೆ ಲಿಂಗದೀಕ್ಷೆ ನೀಡಿದ್ದಲ್ಲದೆ ಅವರಿಗೆ ಬರಗಾಲದಲ್ಲಿ ಶ್ರೀಮಠದ ಬಾವಿಯ ನೀರು ಕೊಟ್ಟು ಮಾನವೀಯತೆ ಮೆರೆದದ್ದು ಸಾಮಾಜಿಕ ಸಮತೆಗೆ ಸಾಕ್ಷಿಯಾಗಿದೆ. ನಿಜಾಮ ಆಡಳಿತದ ಉರ್ದು ಭಾಷಾ ಪ್ರಾಬಲ್ಯದ ಮಧ್ಯೆ ಕನ್ನಡ ಶಾಲೆ ಆರಂಭಿಸಿರುವುದು, ಕರ್ನಾಟಕ ಏಕೀಕರಣ, ಹೈದ್ರಾಬಾದ ಕರ್ನಾಟಕ ವಿಮೋಚನೆ ಸೇರಿದಂತೆ ಹಲವಾರು ನಾಡು ನುಡಿ ಸಂಬಂಧಿತ ಸಮಾಜಮುಖಿ ಚಳವಳಿಗಳಿಗೆ ಪ್ರೇರಕ ಶಕ್ತಿಯಾದವರು. ನೂತನ ಅನುಭವ ಮಂಟಪದ ರೂವಾರಿಗಳಾದ ಇವರಿಗೆ ಈ ಭಾಗದ ಜನತೆಗೆ ಶಿಕ್ಷಣ ನೀಡುವುದು ಬಸವತತ್ವವನ್ನು ಜನಮಾನಸಕ್ಕೆ ತಲುಪಿಸುವುದು, ಜಾತಿ ರಹಿತ ಸಮಾಜ ಕಟ್ಟುವುದು ಮೊದಲ ಆದ್ಯತೆಗಳಾಗಿದ್ದವು. ಹೀಗೆ ಹತ್ತು ಹಲವು ವಿಧಾಯಕ, ರಚನಾತ್ಮಕ ಕಾರ್ಯ ಯೋಜನೆಗಳ ಮೂಲಕ ಶ್ರೀಗಳು ಜನಮಾನಸದಲ್ಲಿ ಈವತ್ತಿಗೂ ನೆಲೆನಿಂತಿದ್ದಾರೆ ಅವರ ಮೌನ ಸೇವೆ ಸಾಧನೆಗಾಗಿ ಕರ್ನಾಟಕ ರಾಜ್ಯೋತ್ಸವ ಪುರಸ್ಕಾರ, ಗುಲಬರ್ಗಾ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಮೊದಲಾದ ಗೌರವಗಳು ಅರಸಿ ಬಂದಿದ್ದವು. ದಿನಾಂಕ 22. 04. 1999 ರಂದು 109 ಚೈತ್ರ ಶಿಶಿರಗಳನ್ನು ಸಮಾನವಾಗಿ ಸ್ವೀಕರಿಸಿ ಬಸವ ಸ್ಮರಣೆಯೊಂದಿಗೆ ಬಯಲಾದರು.

ಮಾತೃ ಹೃದಯದ ಪೂಜ್ಯಶ್ರೀ ಡಾ. ಬಸವಲಿಂಗ ಪಟ್ಟದ್ದೇವರು

ಬಸವಣ್ಣನವರ ದಯೆ ಮೂಲದ ಧರ್ಮವನ್ನು ಅನುಷ್ಠಾನಗೊಳಿಸುತ್ತಿರುವ ಪೂಜ್ಯ ಶ್ರೀ ಡಾ. ಬಸವಲಿಂಗ ಪಟ್ಟದೇವರು (ಪಟ್ಟಾಧಿಕಾರ 1985) ಸಾಮಾಜಿಕ ಸಾಮರಸ್ಯ, ಧರ್ಮ ಸಹಿಷ್ಣುತೆಗೆ ಹೆಸರಾದವರು. ದಯೆ ಜೀವನಪ್ರೀತಿ, ಮೈಗೂಡಿಸಿಕೊಂಡು ಜನರ ನೋವನ್ನು ತಮ್ಮ ನೋವೆಂದು ಭಾವಿಸುವ ಮಾತೃಹೃದಯಿಗಳು. ಕೇವಲ ಉತ್ತಮ ವಿದ್ಯಾಭ್ಯಾಸಕ್ಕೆಂದೇ ಭಾಲ್ಕಿಯ ಹಿರೇಮಠಕ್ಕೆ ಆಗಮಿಸಿ ಸಾತ್ವಿಕ ಸಜ್ಜನಿಕೆ, ಸರಳತೆ ಮೈಗೂಡಿಸಿಕೊಂಡ ಕಾರಣಕ್ಕೆ ಅದೇ ಮಠದ ಪೀಠಾಧಿಪತಿಯಾದವರು ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು ಮೂಲತಃ ಮೃದು ಸ್ವಭಾವದ ಮಾತೃಹೃದಯದವರಾಗಿದ್ದಾರೆ. ಜನರು ಕಷ್ಟದಲ್ಲಿದ್ದಾಗ ಇವರ ಕಣ್ಣಲ್ಲಿ ನೀರು ಬರುತ್ತದೆ. ಮಠಾಧಿಪತಿಗಳಾದರೂ ಅಹಂ, ಸುಳಿಯದ ದಾಸೋಹ ಜೀವಿಗಳು. ಸ್ವಾಮಿಗಳಾದರೂ ಪೂಜೆಯನ್ನೇ ಹೇಳದೆ ಕಾಯಕವೇ ಪೂಜೆಯೆಂದು ಹೇಳುವರು. ಜನರೇ ಮಠಕ್ಕೆ ಬರಬೇಕೆಂದು ಅಪೇಕ್ಷೆ ಮಾಡದೆ ಜನತೆಯತ್ತ ಮಠ ಒಯ್ದವರು.

ಹಿರೇಮಠ ಎಂದರೆ ಅದು ಜನಸತ್ತೆಯ ಭಕ್ತರ ಮಠ. ಹಾಗಾಗಿ ಶ್ರೀಗಳಿಗೆ ಧರ್ಮ ಸಮಾಜ ಎರಡು ಕಣ್ಣು ಒಂದೇ ದೃಷ್ಟಿ. ಅನೇಕ ಮಠಾಧೀಶರಿಗೆ ಪೀಠದಿಂದ ಗೌರವ ಬರುತ್ತದೆ. ಆದರೆ ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರಿಂದ ಪೀಠಕ್ಕೆ ಗೌರವಸಂದಿದ್ದು ಅವರ ರಚನಾತ್ಮಕ ಕಾರ್ಯಗಳಿಂದಲೇ.

ಮಾನವೀಯತೆಯ ಆಗರ :

ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು ದೀನ ದಲಿತರ, ಬಡವರ ನಿರ್ಗತಿಕರ ಆಶಾಕಿರಣವಾಗಿದ್ದಾರೆ. ಹೆತ್ತವರಿಗೆ ಬೇಡವಾದ ತಿಪ್ಪೆಪಾಲಾದ ಹತ್ತಾರು ಅನಾಥ ಮಕ್ಕಳನ್ನು ಸಾಕುತ್ತಿದ್ದಾರೆ. ಹಾನಗಲ್ಲ ಕುಮಾರೇಶ್ವರ ಉಚಿತ ಪ್ರಸಾದ ನಿಲಯದಲ್ಲಿ ಯಾವುದೇ ಜಾತಿಭೇದ ಮಾಡದೇ ಸುಮಾರು 500 ಮಕ್ಕಳಿಗೆ ಅನ್ನ, ಅಕ್ಷರದಾಸೋಹ ನೀಡುತ್ತಿದ್ದಾರೆ. ಗ್ರಾಮೀಣ ಪ್ರದೇಶದ ಪ್ರತಿಭಾವಂತ ಬಡಮಕ್ಕಳಿಗಾಗಿ ಬೀದರದಲ್ಲಿ ಡಾ.ಚನ್ನಬಸವ ಪಟ್ಟದ್ದೇವರ ಪ್ರಸಾದ ನಿಲಯ ತೆರೆದಿದ್ದಾರೆ. ಅನೇಕ ವಿಕಲಚೇತನರಿಗೆ, ವಿಧವೆಯರಿಗೆ ಆಶ್ರಯ ನೀಡಿದ್ದಾರೆ. ಜೊತೆಗೆ ಸಾಮಾಜಿಕ ಬದುಕಲ್ಲಿ ಮಂಗಳ ಕಾರ್ಯಗಳಿಂದ ವಂಚಿತರಾದ ವಿಧವಾ ಸ್ತ್ರೀಯರಿಗೆ ಉಡಿ ತುಂಬಿ ಗೌರವಿಸಿದ್ದಾರೆ. ಶ್ರೀಮಠದಲ್ಲಿ ದಲಿತರಿಗೆ ಪ್ರವೇಶ ನೀಡಿದ್ದಾರೆ. ಭಾಲ್ಕಿ ಹೊರವಲಯದ ಡೊಂಬರಾಟದವರ ಓಣಿ ನಿವಾಸಿಗಳ ಮತ್ತು ಅವರ ಮಕ್ಕಳ ಸರ್ವಾಂಗೀಣ ವಿಕಾಸಕ್ಕಾಗಿ ಪ್ರತಿವರ್ಷ ಅಲ್ಲಿಗೆ ಭೇಟಿ ನೀಡುತ್ತಾರೆ. ಅಲ್ಲಿಯ ಮಕ್ಕಳಿಗೆ ಉಚಿತ ಶಿಕ್ಷಣ, ವಸತಿ, ದಾಸೋಹ ಕಲ್ಪಿಸಿದ್ದಾರೆ. ವಿಶೇಷವಾಗಿ ನಾಗಪಂಚಮಿ ದಿನದಂದು ಹೊಸ ಬಟ್ಟೆಗಳನ್ನು ವಿತರಿಸಿ ಹಾಲು ಹಣ್ಣು ನೀಡುತ್ತಾರೆ. ಹೀಗಾಗಿ ಹಲವಾರು ಜೀವಕಾರುಣ್ಯದ ಕೆಲಸಗಳಿಂದ ಅವರು ಮಾನವೀಯತೆಯ ಆಗರವಾಗಿದ್ದಾರೆ.

ಶಿಕ್ಷಣ ತಜ್ಞರು:

ಶಿಕ್ಷಣವೇ ಶಕ್ತಿ ಎಂದು ತಿಳಿದು, ಶಿಕ್ಷಣ ಮನುಷ್ಯರ ಎಲ್ಲಾ ಸಮಸ್ಯೆಗಳನ್ನು ಪರಿಹರಿಸುತ್ತದೆ ಎಂಬ ಆಶಯದಿಂದ ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು ಹಿರೇಮಠ ಸಂಸ್ಥಾನ ವಿದ್ಯಾಪೀಠ ಟ್ರಸ್ಟ 1992ರಲ್ಲಿ ಆರಂಭಿಸಿ ಆ ಮೂಲಕ ಸುಮಾರು 40 ಅಂಗಸಂಸ್ಥೆಗಳಿಂದ ಗಡಿಭಾಗದಲ್ಲಿ ಕನ್ನಡ ಮಾಧ್ಯಮ ಶಾಲೆ ತೆರೆದು ಹಳ್ಳಿಯ ಜನತೆಗೆ ಗುಣಾತ್ಮಕ ಶಿಕ್ಷಣ ನೀಡುತ್ತಿದ್ದಾರೆ. ಇಂದು ಸುಮಾರು 15 ಸಾವಿರ ವಿದ್ಯಾರ್ಥಿಗಳು ಓದುತ್ತಿದ್ದಾರೆ. ಒಂದು ಸಾವಿರ ಶಿಕ್ಷಕರು ಕಾರ್ಯನಿರತರಾಗಿದ್ದಾರೆ. ಸಂಸ್ಕಾರ ಸಹಿತ ಗುಣಮಟ್ಟದ ಶಿಕ್ಷಣ ನೀಡುತ್ತಿದ್ದಾರೆ.

ಸಾಮಾಜಿಕ ಸಾಮರಸ್ಯದ ಹರಿಕಾರರು:

ಧರ್ಮಾಧಿಕಾರಿಗಳಾದರೂ ಜಾತ್ಯತೀತರು, ಶ್ರೀಮಠದಲ್ಲಿ ಎಲ್ಲ ಜನಾಂಗಕ್ಕೂ ಮುಕ್ತ ಅವಕಾಶ ನೀಡಿದ್ದಾರೆ. ಅಂತರ್ಜಾತಿ ಮದುವೆ ಮತ್ತು ಉಚಿತ ಸಾಮೂಹಿಕ ಕಲ್ಯಾಣ ಮಹೋತ್ಸವ ಏರ್ಪಡಿಸಿರುವರು. ಅಸ್ಪೃಶ್ಯ ಲಿಂಗಾಯತರೆಂದೇ ಕರೆಸಿಕೊಳ್ಳುವ ದಲಿತ ಮೂಲದ ಉರಿಲಿಂಗಪೆದ್ದಿ ಮಠಾಧೀಶರ ರಾಜ್ಯಮಟ್ಟದ ಸಮಾವೇಶ ಆಯೋಜಿಸಿದ ಕೀರ್ತಿ ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರಿಗೆ ಸಲ್ಲುತ್ತದೆ. ದೆಹಲಿಯಲ್ಲಿ ದಲಿತವರ್ಗದ ಜಾಟವಾ ಜನಾಂಗಕ್ಕೆ ಲಿಂಗದೀಕ್ಷೆ ನೀಡಿದ್ದಾರೆ. ಹೀಗೆ ಆರೋಗ್ಯವಂತ ಸಮಾಜ ಕಟ್ಟಲು ಧರ್ಮ ಸಹಿಷ್ಣುತೆಯ ಮೂಲಕ ಸಾಮಾಜಿಕ ಸಾಮರಸ್ಯ ಮೆರೆದವರು.

ಪರಿಸರ ಪ್ರೀತಿ:

ಪರಿಸರ ಸಂರಕ್ಷಣೆ ಎಂದರೆ ಜೀವಜಗತ್ತಿನ ಸಂರಕ್ಷಣೆ. ಮಾನವ ಜೀವನ ವಿಕಾಸದಲ್ಲಿ ಪರಿಸರದ ಪಾಲು ಮಹತ್ವದ್ದು. ಆದರೆ ಆಧುನಿಕತೆಯ ಅಭಿವೃದ್ಧಿಯ ಹೆಸರಲ್ಲಿ ಸೌಲತ್ತುಗಳು ಹೆಚ್ಚಾಗಿ ಪರಿಸರದ ಮೇಲೆ ಆಕ್ರಮಣಗಳೂ ಹೆಚ್ಚಾದಂತೆ ವಾತಾವರಣ ಕಲುಷಿತವಾಗುತ್ತಿರುವುದರಿಂದ ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು ಸಸಿ ನೆಡುವ ಕಾರ್ಯಕ್ರಮ ಪ್ರತಿವರ್ಷ ಮಾಡುತ್ತ ಪರಿಸರ ಪ್ರೀತಿ ಮೆರೆಯುತ್ತಿದ್ದಾರೆ.

ರೈತಮಿತ್ರ:

ಕೋಟಿ ವಿದ್ಯೆಗಿಂತ ಮೇಟಿ ವಿದ್ಯೆಯೇ ಮೇಲು ಎಂಬುದನ್ನು ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು ಅರಿತು ರೈತಮೇಳ, ಕೃಷಿ ಸಂಬಂಧ ವಿಚಾರ ಸಂಕಿರಣವೇರ್ಪಡಿಸಿ, ಎಲ್ಲ ತತ್ವಗಳಿಗೂ ನೇಗಿಲ ತತ್ವವೇ ಮೂಲವೆಂದು ಹೇಳಿ ರೈತಮಿತ್ರರಾಗಿದ್ದಾರೆ.

ಸಂಸ್ಕೃತಿ ಚಿಂತಕರು:

ಧರ್ಮಾನುರಕ್ತರಾದ ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು ಕಲಾರಾಧಕರೂ ಹೌದು. ಶ್ರೀಮಠದ ಮೂಲಕ ನಾಟಕೋತ್ಸವ, ನಗೆಹಬ್ಬ, ವಚನ ಕಂಠ ಪಾಠ ಸ್ಪರ್ಧೆ ನಡೆಸುವರು. ಸಂಗೀತ ಶಾಲೆ ಆರಂಭಿಸಿದ್ದಾರೆ. ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ವ್ಯಕ್ತಿತ್ವ ವಿಕಾಸಕ್ಕೆ ದುಡಿಯುತ್ತಿದ್ದಾರೆ. ಪ್ರತಿವರ್ಷ ಉತ್ತಮ ಕಲಾವಿದರಿಗೆ, ಓದುಗರಿಗೆ, ಬರಹಗಾರರಿಗೆ, ಉತ್ತೇಜನ ಪೂರಕವಾಗಿ ಡಾ.ಚನ್ನಬಸವ ಪಟ್ಟದ್ದೇವರ ಪ್ರಶಸ್ತಿ ಪುರಸ್ಕಾರ ನೀಡುವುರು. ಹೀಗೆ ವಿಭಿನ್ನ ಆಯಾಮದ ಮೂಲಕ ಶ್ರೀಗಳು ಸಂಸ್ಕೃತಿ ಚಿಂತಕರಾಗಿದ್ದಾರೆ.

ಕನ್ನಡ ಜಂಗಮ:

ನಾಡು ನುಡಿ ಕೇಂದ್ರಿತ ಚಿಂತನೆಯೊಂದಿಗೆ ಬಹುದಿನದಿಂದಲೂ ಭಾಲ್ಕಿ ಮಠವನ್ನು ಕನ್ನಡ ಮಠವೆಂದೇ ಕರೆಯುವರು. ಹಾಗೆ ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು ಮಾತೃ ಭಾಷೆಯಿಂದ ಮಾತ್ರ ಉತ್ತಮ ಗ್ರಹಿಕೆ ಸಾಧ್ಯವೆಂದು ಪ್ರತಿಪಾದಿಸುತ್ತಲೇ ಇಂಗ್ಲೀಷ ಮಾಧ್ಯಮ ಶಿಕ್ಷಣದ ವ್ಯಾಪಾರೀಕರಣದ ಮಧ್ಯೆ ಕನ್ನಡ ಮಾಧ್ಯಮ ಶಿಕ್ಷಣ ನೀಡಿ ಅದನ್ನು ಮಾನವೀಕರಣಗೊಳಿಸಿ ಕನ್ನಡ ಜಂಗಮರಾಗಿದ್ದಾರೆ.

ಬಸವತತ್ವ ಪ್ರಸಾರಕರು:

ಆಧುನಿಕ ಜಗತ್ತಿಗೆ ಬಸವತತ್ವ ಅವಶ್ಯಕವಾದಂತೆ ಅದು ವಿಶ್ವಮಾನ್ಯವಾಗಿದೆ. ಅದು ಎಲ್ಲ ಕಡೆ ಪಸರಿಸಬೇಕು ಎಂಬ ಆಶಯದಿಂದ ಬಸವತತ್ವ ಪ್ರಸಾರಕ್ಕಾಗಿ ಆಂಧ್ರ ಮತ್ತು ತೆಲಂಗಾಣ ಹಾಗೂ ಮಹಾರಾಷ್ಟ್ರಗಳಲ್ಲಿ ಬಸವತತ್ವ ಸಮಾವೇಶ, ಸಮ್ಮೇಳನ ಆಯೋಜಿಸಿದ್ದಾರೆ. ತೆಲಗು ಮರಾಠಿಯಲ್ಲಿ ಬಸವತತ್ವ ಕುರಿತು ಹಲವಾರು ಕೃತಿಗಳನ್ನು ಶ್ರೀಮಠದಿಂದ ಪ್ರಕಟಿಸಿದ್ದಾರೆ.

ವ್ಯಕ್ತಿತ್ವ ವಿಕಾಸ:

ಆಧುನಿಕತೆ ಹೆಚ್ಚಾದಂತೆ ಮನುಷ್ಯರು ಯಾಂತ್ರಿಕವಾಗುತ್ತಿರುವುದರಿಂದ ವ್ಯಕ್ತಿಯ ಒಳಹೊರಗಿನ ಶುದ್ಧೀಕರಿಸಿಕೊಳ್ಳಬೇಕೆಂಬುದು ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರ ಆಶಯ.

ಅದಕ್ಕಾಗಿ ಮಕ್ಕಳಿಗಾಗಿ ಬೇಸಿಗೆ ರಜಾ ದಿನಗಳಲ್ಲಿ ಮತ್ತು ಪ್ರಜ್ಞಾವಂತ ನಾಗರಿಕರಿಗಾಗಿ ಶ್ರಾವಣ ವಚನ-ಪ್ರವಚನ, ವಿಶೇಷ ಉಪನ್ಯಾಸ, ಶರಣ ಸಂಗಮ ಮೊದಲ್ಗೊಂಡು ಬಸವಧರ್ಮ ಪ್ರಸಾರ ಶಿಬಿರಗಳ ಮೂಲಕ ವ್ಯಕ್ತಿತ್ವ ವಿಕಾಸಕ್ಕೆ ನಾಂದಿ ಹಾಡಿರುವರು.

ಪುಸ್ತಕ ಸಂಸ್ಕತಿ:



ಮಾಹಿತಿ ತಂತ್ರಜ್ಞಾನದಿಂದಾಗಿ ಪುಸ್ತಕ ಜಗತ್ತು ಹಳೆದಾಗಿ ಹಾಳಾಗುತ್ತಿದೆ. ಆದ್ದರಿಂದ ಬಸವಧರ್ಮ ಪ್ರಸಾರ ಸಂಸ್ಥೆ ಎಂಬ ಪ್ರಕಾಶನದ ಮೂಲಕ ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು ನಾಡಿನ ವಿದ್ವಾಂಸರಿಂದ ಮೌಲಿಕ ಕೃತಿಗಳನ್ನು ಬರೆಸಿ ಪ್ರಕಟಿಸುವ ಮೂಲಕ ಪುಸ್ತಕ ಸಂಸ್ಕೃತಿ ಬೆಳೆಸುತ್ತಿದ್ದಾರೆ.

ಸೃಜನಶೀಲ ಸಾಹಿತಿ:

ಮಾನವತಾವಾದವನ್ನು ವಿಚಾರವಾದವನ್ನು ಬಿತ್ತುವ ಬಹುಮುಖ್ಯ ಮಾಧ್ಯಮವೆಂದರೆ ಸಾಹಿತ್ಯ. ಹಾಗಾಗಿ ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರ ಹಲವಾರು ವೈಜ್ಞಾನಿಕ ಮನೋಭಾವದ, ವೈಚಾರಿಕ ನೆಲೆಗಟ್ಟಿನ ಹಲವಾರು ಸೃಜನಶೀಲ ಲೇಖನಗಳ ಪುಸ್ತಕ ಬರೆದಿರುವರು. ಆ ಪುಸ್ತಕಗಳ ಜನಪ್ರಿಯತೆ ಎಷ್ಟೆಂದರೆ, ಹಿಂದಿ, ಮರಾಠಿ, ತೆಲಗು ಭಾಷೆಗಳಿಗೂ ಅನುವಾದವಾಗಿ ಕೆಲವು ದ್ವಿತೀಯ, ತೃತೀಯ ಹೀಗೆ ಮರು ಮುದ್ರಣಗಳನ್ನು ಕಂಡಿವೆ.

ವಚನ ವಿಶ್ವವಿದ್ಯಾಲಯ:

ಬಸವತತ್ವ ಕೇವಲ ಬೋಧನೆ ತತ್ವವಲ್ಲ, ಅದು ಬದುಕಿನ ತತ್ವ ಬಸವಧರ್ಮ ಆಚರಣೆಯ ಧರ್ಮ. ಅದರ ಅಂತಃಶಕ್ತಿಯಾದ ವಚನ ಸಾಹಿತ್ಯ ಜೀವ ಕಾರುಣ್ಯದಿಂದ ಕೂಡಿದೆ. ಅದರ ವ್ಯಾಪಕ ಅಧ್ಯಯನವಾಗಬೇಕು. ಬಹುಮುಖಿ ಅಂತರಶಿಸ್ತಿಯ ಸಂಶೋಧನಾ ಅಧ್ಯಯನವಾಗಬೇಕು. ಈ ದಿಸೆಯಲ್ಲಿ ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು ವಚನ ವಿಶ್ವವಿದ್ಯಾಲಯವೆಂದು ಆರಂಭಿಸಲು ತೀರ್ಮಾನಿಸಿದ್ದಾರೆ. ಬಸವಾದಿ ಶರಣರ ಕಾಯಕ ನೆಲವಾದ, ಬಸವಕಲ್ಯಾಣದಲ್ಲಿ ತಮ್ಮ ಪಟ್ಟಾಧಿಕಾರದ ಬೆಳ್ಳಿಹಬ್ಬಕ್ಕೆ ಬಂದ ರೂಪಾಯಿ 25 ಲಕ್ಷ ಹಮ್ಮಿಣಿ ಹಣದಿಂದ ಅದಕ್ಕೆ ಬೇಕಾಗುವ ಸೂಕ್ತ ಭೂಮಿ ಖರೀದಿಸಿದ್ದಾರೆ.

ಅನುಭವಮಂಟಪದ ಸಾರಥ್ಯ:

ಪ್ರಭುಸತ್ತೆಯ ಮುರಿದು ಪ್ರಜಾಸತ್ತೆ ನೆಲೆಗೊಳಿಸಿ, ಅಗ್ರಜನಷ್ಟೆ ಅಂತ್ಯಜನೆಂದು ಸಾರಿ ಸ್ತ್ರೀ-ಪುರುಷರು ಸಮಾನರೆಂದು ನಡೆಯನ್ನು ನುಡಿಯಲ್ಲಿ ಪೂರೈಸಿ ಜಗತ್ತೆ ಬೆರಗುಗೊಳ್ಳುವ ರೀತಿಯಲ್ಲಿ ಸಾಮಾಜಿಕ ಬದಲಾವಣೆ ತಂದು ವಿಶ್ವಮಾನವ ಪ್ರಜ್ಞೆ ಬೆಳೆಸಿದ್ದು ಮನುಷ್ಯರ ಘನತೆ ಹೆಚ್ಚಿಸಿದ್ದು, 12ನೇ ಶತಮಾನದ ಅನುಭವಮಂಟಪ. ಅದರ ಆಶೋತ್ತರಗಳನ್ನು ಪುನಃ ನೆಲೆಗೊಳಿಸಲು ಹುಟ್ಟಿಕೊಂಡ ಬಸವಕಲ್ಯಾಣದ ನೂತನ ಅನುಭವಮಂಟಪ ಅಧ್ಯಕ್ಷತೆಯನ್ನು ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರಿಗೆ ವಹಿಸಿದ್ದು ಅವರ ಸಾರಥ್ಯದಲ್ಲಿ ಅನುಭವಮಂಟಪದ ಕೀರ್ತಿ ವ್ಯಾಪಕವಾಗಿ ಹರಡಲೆಂಬುದು ಸಮುದಾಯದ ಆಶಯವಾಗಿದೆ.

ಕೀರ್ತಿ ಕಳಸ:

ಬಸವತತ್ವ ಪ್ರಸಾರ ಸಮಾಜ ಸೇವೆ, ಶೈಕ್ಷಣಿಕ ಅಭಿವೃದ್ಧಿ, ಕನ್ನಡತ್ವದ ವಿಕಾಸ, ಹೀಗೆ ಹಲವಾರು ವಿಧಾಯಕ ಕಾರ್ಯಗಳ ಮೂಲಕ ಗಂಧದ ಕೊರಡಂತೆ ತಮ್ಮನ್ನು ಸವೆಸಿಕೊಂಡಿರುವ ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು ಪ್ರಚಾರ ಪ್ರೀಯತೆಯಿಂದ ದೂರ ನಿಂತು, ಮೌನ ಸಾಧನೆಯಲ್ಲಿದ್ದಾರೆ. ಆದಾಗಿಯೂ ಇವರ ಸದ್ದಿಲ್ಲದ ಸತ್ಕ್ರಿಯೆಗಳಿಗೆ ಅರಸಿ ಬಂದ ಪ್ರಶಸ್ತಿ ಗೌರವಗಳು ನೂರಾರು. ಅದರಲ್ಲಿ ಮುಖ್ಯವಾಗಿ ಗುಲಬರ್ಗಾ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪದವಿ, ಸುವರ್ಣ ಕರ್ನಾಟಕ ಏಕೀಕರಣ ಪುರಸ್ಕಾರ, ರಮಣಶ್ರೀ ಶರಣ ಪ್ರಶಸ್ತಿ, ಕಲ್ಯಾಣ ಬಸವಶ್ರೀ ಪ್ರಶಸ್ತಿ, ಅಲ್ಲಮಪ್ರಭು ಸಿದ್ಧಸಂಸ್ಥಾನ ಮಠದಿಂದ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಸುವರ್ಣ ಕರ್ನಾಟಕ ರತ್ನ ಪ್ರಶಸ್ತಿ, ಸುರಭಿ ಪ್ರಶಸ್ತಿ ಹೀಗೆ ಹಲವಾರು ಗೌರವ ಪುರಸ್ಕಾರಗಳು ಬಂದಾಗ

ಬಯಸಿ ಬಂದದ್ದು ಅಂಗಭೋಗ, ಬಯಸದೇ ಬಂದದ್ದು ಲಿಂಗಭೋಗ ಎಂಬಂತೆ ನಿರ್ಲಿಪ್ತ ಭಾವದಿಂದ ಸ್ವೀಕರಿಸಿ ಜನತೆಗೆ ಆದರ್ಶ ಪ್ರಾಯರಾಗಿ ನಾಡಿಗೆ ಕಳಸ ಪ್ರಾಯವಾಗಿದ್ದಾರೆ.

ಭಾವಿಪಟ್ಟದ್ದೇವರು :

ತಮ್ಮೊಂದಿಗೆ ತಮ್ಮ ಹೆಜ್ಜೆಯಲ್ಲಿ ಹೆಜ್ಜೆಯನ್ನಿರಿಸಿ, ತಮ್ಮ ನೆರಳಂತೆಸಾಗಿ ಬಂದಿರುವಶ್ರೀ ಗುರುಬಸವದೇವರಲ್ಲಿ ಭಾವಿಪಟ್ಟದ್ದೇವರನ್ನು ಕಂಡವರು. ದೂರದೃಷ್ಟಿಯುಳ್ಳಶ್ರೀಗಳು ತಮ್ಮಪಟ್ಟಾಧಿಕಾರ ವಹಿಸಿಕೊಂಡ 25 ವರ್ಷಗಳ ಕಾಲ ವಿಧಾಯಕ ಸೇವೆಸಲ್ಲಿಸಿ ಶ್ರೀ ಮಠಕ್ಕೆ ಹೊಸ ಶಕ್ತಿ ನೀಡಲೆಂದು ಶ್ರೀಗುರುಬಸವ ದೇವರಿಗೆ ದಿನಾಂಕ: 22.12.2011 ರಂದೆ ಉತ್ತರಾಧಿಕಾರಿಯಾಗಿ ನೇಮಿಸಿ ಶ್ರೀಮಠದ ಸದ್ಭಕ್ತರ ಸದಿಚ್ಛೆ ಮೇರೆಗೆ ಇದೀಗ(22.04.2016) ಭಾಲ್ಕಿ ಹಿರೇಮಠ ಸಂಸ್ಥಾನಕ್ಕೆಪೂಜ್ಯ ಶ್ರೀ ಗುರುಬಸವದೇವರ ಸ್ಥಿರ-ಚರ ಪಟ್ಟಾಧಿಕಾರ ಸಮಾರಂಭವನ್ನು ಪೂಜ್ಯಶ್ರೀ ಡಾ. ಚನ್ನಬಸವಪಟ್ಟದ್ದೇವರ 17ನೆಯ ಸ್ಮರಣೋತ್ಸವ ಜೊತೆಗೆ ವಿಶೇಷವಾಗಿ ಆಯೋಜಿಸಿರುವುದು ಅರ್ಥಪೂರ್ಣವಾಗಿದೆ.

ಕ್ರಿಯಾಶೀಲ ಪೂಜ್ಯ ಶ್ರೀ ಗುರುಬಸವದೇವರು

ತತ್ವಜ್ಞಾನದ ತವರಾದ ಗ್ರೀಕ್‌ನ ಜಗತ್ಪಸಿದ್ಧ ಗುರು ಶಿಷ್ಯ ಪರಂಪರೆಯೊಂದಿದೆ, ಸಾಕ್ರೇಟಿಸ್, ಪ್ಲೇಟೋ, ಅರಿಸ್ಟಾಟಲ್ ಅಲೆಗ್ಸಾಂಡರ್, ಹಾಗೆ ಕನ್ನಡದಲ್ಲಿ ಸಹ ಎಂ. ಗೋವಿಂದ ಪೈ. ಕುವೆಂಪು ಜಿ.ಎಸ್. ಶಿವರುದ್ರಪ್ಪ, ಓ.ಎಲ್. ನಾಗಭೂಷಣ ಸ್ವಾಮಿ ಇತ್ಯಾದಿ. ಪೂಜ್ಯ ಶ್ರೀ ಗುರುಬಸವ ದೇವರು ನೆನಪಾದಾಗಲೆಲ್ಲ ಈ ಗುರು ಶಿಷ್ಯ ಪರಂಪರೆ ನೆನಪಾಗುತ್ತದೆ. ಏಕೆಂದರೆ ಭಾಲ್ಕಿ ಹಿರೇಮಠ ಸಂಸ್ಥಾನದ ಪೂಜ್ಯ ಶ್ರೀ ಡಾ॥ ಚನ್ನಬಸವ ಪಟ್ಟದೇವರು. ಪೂಜ್ಯ ಶ್ರೀ ಡಾ. ಬಸಲಿಂಗ ಪಟ್ಟದ್ದೇವರು, ಪೂಜ್ಯ ಶ್ರೀ ಗುರುಬಸವ ದೇವರು ಮೇಲಿನ ಮಾದರಿಗೆ ಹೊರತಾದವರಲ್ಲ.

ರಾಜಕುಮಾರ :

ಬೀದರ ಜಿಲ್ಲೆಯ ಔರಾದ ತಾಲೂಕಿನ ಚಟ್ನಾಳ ಗ್ರಾಮದ ಪ್ರತಿಷ್ಠಿತ ಮೂಲಗೆ ಪರಿವಾರದ ತಾಯಿ ಪುತಳಾಬಾಯಿ ತಂದೆ ಸುಭಾಷ ಮೂಲಗೆಯವರ ಸುಪುತ್ರನಾಗಿ ದಿನಾಂಕ: 06-08-1982 ರಂದು ಜನಿಸಿದ ರಾಜಕುಮಾರ (ಪೂಜ್ಯ ಶ್ರೀ ಗುರುಬಸವ ದೇವರ ಪೂರ್ವಾಶ್ರಮದ ಹೆಸರು) ಒಂದರಿಂದ ಐದನೆಯ ತರಗತಿಯವರೆಗೆ ಬೀದರ ಜಿಲ್ಲೆಯ ಔರಾದದಲ್ಲಿ ಓದಿ, ಮುಂದೆ ಭಾಲ್ಕಿಯ ಕುಮಾರೇಶ್ವರ ಉಚಿತ ಪ್ರಸಾದ ನಿಲಯದಲ್ಲಿ ಪ್ರವೇಶ ಪಡೆದು ಡಾ. ಚನ್ನಬಸವ ಪಟ್ಟದೇವರ ಜೀವಿತ ಕಾಲದಲ್ಲೇ ಅವರ ಗುರುಕಾರುಣ್ಯದ ಪ್ರೀತಿಗೆ ಪಾತ್ರರಾಗಿದ್ದು ಅವರ ಬದುಕಿನ ಅವಿಸ್ಮರಣೀಯ ಕ್ಷಣಗಳು.

ಗುರುಬಸವ ದೇವರು :

ರಾಜಕುಮಾರ ಎಂಬ ನಾಮಧ್ಯೇಯದಿಂದ ಬಂದ ಬಾಲಕ 'ಗುರುಬಸವ' ಆದ ಪರಿ ರೋಚಕವಾಗಿದೆ. ಸದಾ ಕ್ರಿಯಾಶೀಲರಾಗಿದ್ದ ಗುರುಬಸವ ಶ್ರೀಮಠದ ಪ್ರಾರ್ಥನೆ ಸಮಾರಂಭ ಸಮಾವೇಶ ಸೇರಿದಂತೆ ಎಲ್ಲಾ ಕಾರ್ಯ ಕ್ರಮಗಳಲ್ಲಿ ಸದಾ ಭಕ್ತಿ ಪ್ರೀತಿಯಿಂದ ಮುಂದಾಗಿ ಪಾಲ್ಗೊಳ್ಳುತಿದ್ದ ಕಾಲದಲ್ಲಿ ಚಿತ್ರದುರ್ಗ ಮುರುಘಾ ಮಠದ ಪೂಜ್ಯ ಶ್ರೀ ಡಾ ಶಿವಮೂರ್ತಿ ಶರಣರು ಒಮ್ಮೆ ಭಾಲ್ಕಿ ಮಠಕ್ಕೆ ಬಂದಾಗ ರಾಜಕುಮಾರರನ್ನು ಕರೆದು ಹೆಸರು ಕೇಳಲು ನನ್ನ ಹೆಸರು ರಾಜಕುಮಾರ ಎಂದರಂತೆ. ಇದು ಅಷ್ಟು ಸಮಂಜಸವಲ್ಲ ವಿಶೇಷವಾಗಿ ಮಠದ ಪರಿಸರಕ್ಕೆ ಸೂಕ್ತವಲ್ಲ ಆದ್ದರಿಂದ ನಾನೇ ಹೊಸ ಹೆಸರು ಇಡಬಹುದಾ ಎಂದು ಕೇಳಲು ಆಗಲಿ ಎಂದರಂತೆ. ಅದಕ್ಕೆ

ಅವರು ರಾಜಕುಮಾರ ಹೆಸರಿನ ಬದಲಾಗಿ 'ಗುರುಕುಮಾರ' ಎಂದು ಕರೆದರು. ಕೆಲದಿನ ಈ ಹೆಸರು ಚಾಲ್ತಿಯಲ್ಲಿತ್ತು. ಮುಂದೆ ಯೋಗಾಯೋಗವೆಂಬಂತೆ ಗದುಗಿನ ತೋಂಟದಾರ್ಯ ಮಠದ ಪೂಜ್ಯ ಶ್ರೀ ಜಗದ್ಗುರು ಡಾ. ಸಿದ್ದಲಿಂಗ ಮಹಾಸ್ವಾಮಿಗಳು ಭಾಲ್ಕಿ ಶ್ರೀಮಠಕ್ಕೆ ಬಂದಾಗ ಗುರುಕುಮಾರನ ಕ್ರಿಯಾಶೀಲತೆ ಆಕರ್ಷಕ ಕಾರ್ಯ ಶೈಲಿ ನೋಡಿ ಅವರು ಕರೆದು ಗುರುಕುಮಾರರ ಹೆಸರು ಕೇಳಿದರಂತೆ ಅಲ್ಲದೇ ಈ ಹೆಸರು ಅಷ್ಟು ಸೂಕ್ತವಲ್ಲ ಇದು ಬಸವತತ್ವದ ಮಠವಾಗಿರುವುದರಿಂದ 'ಬಸವಕುಮಾರ' ಎಂದು

ಹೆಸರಿಡಬಹುದಲ್ಲ ಎಂದಾಗ ಅದನ್ನು ಒಪ್ಪಿ ಮುಂದೆ ಬಸವಕುಮಾರ ಎಂಬ ಹೆಸರು ಚಾಲ್ತಿಯಲ್ಲಿ ಬಂತು. ಇದೆಲ್ಲವನ್ನು ಸೂಕ್ಷ್ಮವಾಗಿ ಗಮನಿಸಿದ ಪೂಜ್ಯ ಶ್ರೀ ಡಾ. ಬಸವಲಿಂಗ ಪಟ್ಟದ್ದೇವರು ಚಿತ್ರದುರ್ಗದ ಶ್ರೀಗಳು ಇಟ್ಟ ಹೆಸರಿನ ಮೊದಲ ಒಂದು ಪದ ಹಾಗೂ ಗದುಗಿನ ಶ್ರೀಗಳು ನೀಡಿದ ಒಂದು ಪದ ಸೇರಿಸಿ ''ಗುರುಬಸವ'' ಎಂದು ಕರೆಯಲು ಆರಂಭಿಸಿದರು. ಅಂದಿನಿಂದ ಈ ವರೆಗೆ ಗುರುಬಸವ ಎಂಬ ಹೆಸರು ಚಾಲ್ತಿಯಲ್ಲಿ ಇರುವುದು ಗಮನಾರ್ಹ ಸಂಗತಿ. ಸಾಮಾನ್ಯವಾಗಿ ಮಠಕ್ಕೆ ಬಂದಾಗ ಸಾಧಕರಾಗುವವರಿಗೆ ಮಾತ್ರ ಹೆಸರು ಬದಲಾವಣೆಮಾಡಿ ಉತ್ತರಾ ಕಾರಿಗಳಾದಾಗ ಮತ್ತೊಂದು ಹೆಸರು ಬದಲಾವಣೆ ಮಾಡುವ ಪರಿಪಾಠಗಳು ನಿರಂತರವಾಗಿದ್ದರೂ ಇವರ ವಿಷಯದಲ್ಲಿ ಅಕಸ್ಮಿಕವಾಗಿಯೆ ಬದಲಾದ ಹೆಸರು ಸಾತ್ವಿಕ ವಿಚಾರಕ್ಕೆ ಪೂರಕವಾಗಿದೆ.

ಜ್ಯೋತಿ ಮುಟ್ಟಿದ ಬತ್ತಿ ಜ್ಯೋತಿಯಾಗಿರುವ ಪೂಜ್ಯ ಶ್ರೀ ಗುರುಬಸವದೇವರು ಬಸವಭಕ್ತಿ, ಮಾನವಪ್ರೀತಿಯ ಒಡನಾಟಕ್ಕೆ ಹೆಸರಾದ ಪೂಜ್ಯ ಶ್ರೀ ಗುರುಬಸವದೇವರು ಸುಮಾರು ಎರಡೂವರೆ ದಶಕಗಳಿಂದ ಪೂಜ್ಯ ಶ್ರೀ ಡಾ. ಬಸವಲಿಂಗ ಪಟ್ಟದೇವರ ಮಾರ್ಗದರ್ಶನದಲ್ಲಿ ಅಭ್ಯಾಸ ಅಧ್ಯಯನ ಸೇವೆ ಮಾಡುತ್ತ ವಿದ್ಯಾರ್ಜನೆಗಾಗಿ ಬಂದರೂ ಅಂತಃಕರಣದ ಅಪ್ಪಗಳಾದ ಪೂಜ್ಯ ಶ್ರೀ ಡಾ॥

ಬಸವಲಿಂಗಪಟ್ಟದ್ದೇವರ ಪ್ರಭಾವಕ್ಕೊಳಗಾಗಿ ಓದಿಗಿಂತ ಸೇವೆಯೇ ಶ್ರೇಷ್ಠವೆಂದರಿತು ಪೂಜ್ಯರ ಪ್ರೀತಿಯ ಶಿಷ್ಯರಾದರು. ಪೂಜ್ಯ ಶ್ರೀಗಳಿಗೂ, ಅಪಾರ ಭಕ್ತ ಸಮೂಹಕ್ಕೂ ಹೀಗೆ ಎಲ್ಲರ ಪ್ರೀತಿಗೆ ಪಾತ್ರರಾಗಿರುವ ಪೂಜ್ಯ ಶ್ರೀ ಗುರುಬಸವ ದೇವರು. ಪೂಜ್ಯ ಶ್ರೀ ಜಗದ್ಗುರು ಡಾ. ಸಿದ್ಧಲಿಂಗ ಮಹಾಸ್ವಾಮಿಗಳ ಎಡೆಯೂರು ತೋಂಟದಾರ್ಯ ಗದಗ ಸೇರಿದಂತೆ ನಾಡಿನ ಅನೇಕ ಮಠಾಧೀಶರ ಭಕ್ತಿಯ ಪ್ರೀತಿ- ವಿಶ್ವಾಸಗಳಿಗೆ ಭಾಜನರಾದವರು. ಲಿಂಗೈಕ್ಯ ಡಾ. ಚನ್ನಬಸವ ಪಟ್ಟದೇವರ ಸ್ಮರಣೋತ್ಸವ, ಜಯಂತ್ಯುತ್ಸವ,

ಒಳಗೊಂಡಂತೆ ಮಠದ ಇತರ ಎಲ್ಲ ಚಟುವಟಿಕೆಗಳ ಯಶಸ್ಸಿನ ರೂವಾರಿಗಳಾಗಿದ್ದು ಕಾಯಕ ನಿಷ್ಠೆ, ಬಸವ ಭಕ್ತಿ ಹಾಗೂ ಜವಾಬ್ದಾರಿಯಿಂದ ಕೆಲಸ ಮಾಡುತ್ತಿರುವುದು ಸರ್ವರಿಗೂ ತಿಳಿದ ವಿಷಯವಾಗಿದೆ. ಸರಳತೆ, ಸಹಜತೆ, ದಯೆ, ಅಂತಃಕರಣ ಮುಂತಾದ ಸದ್ಗುಣಗಳ ಸಂಪನ್ನರಾದ ಗುರುಬಸವರವರು ಶ್ರೀಗಳ ಆಪೇಕ್ಷೆಯಂತೆ ಮಠದ ಉತ್ತರಾಧಿಕಾರಿಯಾಗಲು ಒಪ್ಪಿರುವುದೇ ನಮ್ಮೆಲ್ಲರ ಪುಣ್ಯ. ಉತ್ತರಾಕಾರಿಗಳಾದ ಮೇಲೆ ಪೂಜ್ಯ ಶ್ರೀ ಡಾ. ಬಸವಲಿಂಗ ಪಟ್ಟದೇವರ ಮಾರ್ಗ ದರ್ಶನದಲ್ಲಿ ಹಲವಾರು ಜನಪರ. ಜೀವಕಾರುಣ್ಯದ ವಿಧಾಯಕ ಕಾರ್ಯಗಳು ಜರುಗುತ್ತಿವೆ. ಶ್ರೀ ಮಠವು ಅಭಿವೃದ್ಧಿಯ ಹೆಜ್ಜೆಯಲ್ಲಿದ್ದು ಪೂಜ್ಯ ಶ್ರೀ ಗುರುಬಸವ ದೇವರಿಗೆ ಪಟ್ಟಾಧಿಕಾರ ಮಾಡುವ ಪ್ರಸ್ತಾಪ ಬಂದಾಗ ಆಧ್ಯಾತ್ಮಿಕ ಹಂಬಲವುಳ್ಳವರಾದ್ದರಿಂದ ಇನ್ನೂ ಪಟ್ಟಾಧಿಕಾರ ಬೇಡವೆಂದರೂ ಪೂಜ್ಯ ಶ್ರೀ ಡಾ|| ಬಸವಲಿಂಗಪಟ್ಟದ್ದೇವರ ಸದ್ಭಕ್ತಿಯ ಪ್ರೀತಿ, ಶ್ರೀಮಠದ ಭಕ್ತರ ಅಭಿಮಾನದ ಒತ್ತಡಗಳನ್ನು ಮೀರಲಾರದೆ, ಬಯಸದೆ ಬಂದುದು ಲಿಂಗಭೋಗವೆಂದರಿತು ಪಟ್ಟಾಧಿಕಾರ ಸಮಾರಂಭಕ್ಕೆ ಒಪ್ಪಿರುತ್ತಾರೆ. ಇದು ಸದ್ಭಕ್ತರ ಅಹೋಭಾಗ್ಯ ಈ ನೆಲದ ಸುಕೃತ ಪುಣ್ಯ ಎನ್ನಬಹುದು.

ರಾಷ್ಟ್ರಪ್ರೇಮಿ :

ಪೂಜ್ಯ ಶ್ರೀ ಗುರುಬಸವದೇವರು ಅಪ್ಪಟ ದೇಶಭಕ್ತಿಯ ರಾಷ್ಟ್ರಪ್ರೇಮಿ. ಅವರಿಗೆ ಶರಣತತ್ವದ ಬಹುದೊಡ್ಡ ಪ್ರಭಾವವಿರುವುದರಿಂದ ದೇಶಿಯ ಚಿಂತನೆ ಬಗ್ಗೆ ಅಪಾರ ಗೌರವವಿದೆ. ಬಸವಾದಿ ಶರಣರು ಸೇರಿದಂತೆ ಗಾಂಧೀಜಿ, ಭಗತಸಿಂಗ್, ಮೊದಲಾದ ದಾರ್ಶನಿಕರ ತಾತ್ವಿಕ ಪ್ರೇರಣೆ ಪಡೆದವರಾಗಿದ್ದಾರೆ.

ಓದಿನ ಆಸಕ್ತಿ :

ಸ್ವತಃ ತಾವು ಯಾವುದೇ ವಿಶ್ವವಿದ್ಯಾಲಯಕ್ಕೆ ಹೋಗಿ ಅಧ್ಯಯನ ಮಾಡದಿದ್ದರೂ ಜೀವನದ ಅನುಭವವೆ ಪಾಠಗಳಾಗಿದ್ದು ಲೋಕಜ್ಞಾನವೆ ವಿಶ್ವವಿದ್ಯಾಲಯವೆಂದು ತಿಳಿದ ಅವರು ಓದಿನಲ್ಲಿ ಅಪಾರ ಆಸಕ್ತಿ ತಳೆದವರಾಗಿದ್ದಾರೆ. ದಿನನಿತ್ಯ ವಚನ ಓದುವುದು, ಪತ್ರಿಕೆ ಗಮನಿಸುವುದು ನಿತ್ಯದ ದಿನಚರಿಯಾಗಿರುವ ಕಾರಣವೆ ಅವರಿಗೆ ಸಮಕಾಲೀನ ಸಂಗತಿಗಳಿಗೆ ಸಹಸ್ಪಂದಿಸುವ ಹೃದಯ ಶ್ರೀಮಂತಿಕೆಯಿದೆ. ಪ್ರತಾಪಸಿಂಹ, ಮಣಿಕಾಂತ, ವಿಶ್ವೇಶ್ವರಭಟ್ಟ ಮೊದಲಾದ ಶ್ರೇಷ್ಠ ಚಿಂತಕರ ಅಂಕಣ ಬರಹಗಳನ್ನು ನಿರಂತರ ಓದುವ ಇವರ ಮೇಲೆ ಡಾ. ಗುರುರಾಜ ಕರಜಗಿಯವರ ಪ್ರಭಾವ ಅಗಾಧವಾಗಿದೆ.

ತಾಯ್ತನದ ಪ್ರೀತಿ :

ಪೂಜ್ಯ ಶ್ರೀ ಡಾ॥ ಬಸವಲಿಂಗ ಪಟ್ಟದ್ದೇವರು ಮಾತೃ ಹೃದಯದವರಾಗಿದ್ದು ಅನಾಥ ಮಕ್ಕಳನ್ನು ಸಂರಕ್ಷಿಸುತ್ತಿದ್ದರೆ ಅವರ ಕೃಪಾ ಕಟಾಕ್ಷೆಯಲ್ಲಿ ಬೆಳೆದ ಪೂಜ್ಯ ಶ್ರೀ ಗುರುಬಸವದೇವರು ಆ ಅನಾಥ ಮಕ್ಕಳ ಬಗ್ಗೆ ವಿಶೇಷ ಕಾಳಜಿ ತೋರುತ್ತಿರುವುದು ಅವರ ತಾಯ್ತನದ ಪ್ರೀತಿಗೆ ಸಾಕ್ಷಿಯಾಗಿದೆ.

ಶೈಕ್ಷಣಿಕ ಪ್ರೀತಿ:

ಮನುಷ್ಯರ ಎಲ್ಲಾ ಸಾಮಾಜಿಕ ಸಮಸ್ಯೆಗಳಿಗೆ ಏಕೈಕ ಪರಿಹಾರವೆಂದರೆ ಶಿಕ್ಷಣವೆಂದರಿತ ಪೂಜ್ಯ ಶ್ರೀ ಗುರುಬಸವದೇವರು ಸದಾ ಶೈಕ್ಷಣಿಕ ಅಭಿವೃದ್ಧಿಯ ಚಿಂತಕರಾಗಿದ್ದಾರೆ. ಪ್ರತಿ ಶಾಲೆಗಳಿಗೆ ಭೇಟಿ ನೀಡುತ್ತ ವಿದ್ಯಾರ್ಥಿಗಳಲ್ಲಿ ಸದಭಿರುಚಿ ಮೂಡಿಸುವುದು, ಸಂಸ್ಕಾರ ಸಹಿತ ಗುಣಾತ್ಮಕ ಶಿಕ್ಷಣ ದೊರೆಯಬೇಕೆಂದು ಅಪೇಕ್ಷೆ ಪಡುವ ಅವರು ಶಿಕ್ಷಣದಲ್ಲಿ ಆಧುನಿಕ ಪರಿಕರಗಳು, ಹೊಸ ಪ್ರಯೋಗಶೀಲತೆಗಳು ಗಮನಕ್ಕೆ ಬಂದಾಗ ಅವನ್ನು ತಕ್ಷಣ ತಮ್ಮ ಶಿಕ್ಷಣ ಸಂಸ್ಥೆಗಳಲ್ಲಿ ಅಳವಡಿಸುವ ಹಂಬಲ ಹೊಂದಿರುವರು.

ಸಮಕಾಲೀನ ಸ್ಪಂದನ :

ಯಾವುದೇ ದಾರ್ಶನಿಕ ವ್ಯಕ್ತಿಗಳಿಗೆ ಅವರವರ ನಾಡಿನಲ್ಲಿ ಮನ್ನಣೆ ದೊರೆಯಲಾರದೆಂಬ ಮಾತು ಅನೇಕ ಸಲ ಹುಸಿಯಾಗುತ್ತಲೆ ಅವರನ್ನು ಬೆಂಬಲಿಸುವ, ಅರ್ಥಮಾಡಿಕೊಳ್ಳುವ ಅವರ ವಿಚಾರ ಚಿಂತನೆಗಳು ಪ್ರಸಾರ ಮಾಡುವ ಹಿತೈಷಿಗಳು ಇರುವ ಕಾರಣಕ್ಕೆ ಅವರೆಲ್ಲ ಜನಪ್ರಿಯರಾಗುತ್ತಾರೆ. ಉದಾ : ಬುದ್ಧನಿಗೆ ಆನಂದ ಉಪಾಲಿಯರು, ಯೇಸುವಿಗೆ ಮ್ಯಾಥ್ಯುಮಾಲ್ಸ್, ಲ್ಯೂಕ್, ಮಾರ್ಕ್ಸರಿಗೆ ಎಂಗೆಲ್ಸ್, ಬವಸಣ್ಣನವರಿಗೆ ಅಲ್ಲಮ, ಚನ್ನಬಸವಣ್ಣ ಗಾಂಧೀಜಿಗೆ ಮಹಾದೇವ ದೇಸಾಯಿ, ರಾಮಕೃಷ್ಣ ಪರಮಹಂಸರಿಗೆ ಸ್ವಾಮಿ

ವಿವೇಕಾನಂದ ಇರದಿದ್ದರೆ ಆ ಮಹಾತ್ಮರ ಜೀವನ ದರ್ಶನ ಮುಂದಿನ ಪೀಳಿಗೆಗೆ ದಕ್ಕುತ್ತಿರಲಿಲ್ಲ. ಅಂಥವರ ಜೀವನ ಅಪೂರ್ಣವಾಗಿಯೇ ಉಳಿಯುತ್ತಿತ್ತು. ಸಮಾನ ಮನಸ್ಸಿನ ಸೂಕ್ಷ್ಮ ಗುಣ ಗ್ರಹಿಕೆಯ ನಿಕಟ ವರ್ತಿಗಳಿಗೆ ಅವರ ಬದುಕಿನ ಸೂಕ್ಷ್ಮ ಸಂಗತಿಗಳು ಸಿಗುವಂತೆ ಸಾಕ್ಷಿ ಪ್ರಜ್ಞೆಯ ದೂರದವರೆಗೆ ಅವರ ಬದುಕಿನ ಇತರ ಮಗ್ಗುಲಗಳ ಪರಿಚಯವಾಗುತ್ತದೆ. ಪೂಜ್ಯತೆಯ ಭಾವದಿಂದ ನೋಡುವವರಿಗೆ ಅವರ ಬದುಕು ಬೆಳಕಾಗಿ, ಬೆರಗಾಗಿ ಕಂಡರೆ ದೂರದವರಿಗೆ ಅವರ ಬದುಕಿನ ಕತ್ತಲೆಯ ಭಾಗವು ಕಂಡರೆ ಆಶ್ಚರ್ಯ ಪಡಬೇಕಿಲ್ಲ. ಸಾಮಾನ್ಯವಾಗಿ ದಾರ್ಶನಿಕರ ಸಮಕಾಲೀನ ಮನಸ್ಥಿತಿ, ಸಂಸ್ಕಾರ, ಸಂದರ್ಭಗಳಿಗೆ ತಕ್ಕಂತೆ ಮತ್ತೊಬ್ಬರ ಗುಣಾವಗುಣಗಳು ಗ್ರಹಿಸುವುದರೊಂದಿಗೆ ಒಬ್ಬ ಮಹಾ ಪುರುಷರ ನೆಲೆ ಬೆಲೆಗಳ ತೌಲನಿಕ ವಿವೇಚನೆ ವಿಭಿನ್ನ ಅಭಿಪ್ರಾಯಗಳ ಉಪಯುಕ್ತವಾಗುವುದು ಜೊತೆಗೆ ಆಯಾ ದಾರ್ಶನಿಕರ ವ್ಯಕ್ತಿತ್ವದ ಹರಹಿಗೆ ಕಾರಣವಾಗುವದೆಂಬ ಸದಾಶಯದಿಂದ ಪೂಜ್ಯ ಶ್ರೀ ಗುರುಬಸವ ದೇವರ ಕುರಿತ ಸಮಕಾಲೀನ ಪೂಜ್ಯರ ಹಿರಿಯರ ಸದಭಿಪ್ರಾಯಗಳನ್ನು ಇಲ್ಲಿ ದಾಖಲಿಸಲಾಗಿದೆ.

ತ್ರಿಕರಣ ಶುದ್ಧ :

ಹುಲಸೂರು ಶ್ರೀ ಗುರುಬಸವೇಶ್ವರ ಸಂಸ್ಥಾನ ಮಠದ ಪೂಜ್ಯ ಶ್ರೀ ಶಿವಾನಂದ ಮಹಾ ಸ್ವಾಮಿಗಳವರು ಪೂಜ್ಯ ಶ್ರೀ ಗುರುಬಸವದೇವರ ಕುರಿತು ಸದಭಿಪ್ರಾಯ ನುಡಿಯುತ್ತ ''ಶ್ರೀಗಳು ಪೂಜ್ಯ ಡಾ. ಬಸವಲಿಂಗ ಪಟ್ಟದ್ದೇವರ ಗುರು ಕಾರುಣ್ಯದಿಂದ ಪಾದರಸದಂತೆ ಇರುವ ಪೂಜ್ಯ ಶ್ರೀ ಗುರುಬಸವದೇವರು ಶ್ರೀಮಠದ ವಿಧಾಯಕ ಕಾರ್ಯಗಳ ಜೊತೆಗೆ ಜೀವಪರ, ಜನಹಿತ ಕೆಲಸಗಳಿಗೆ ತಮ್ಮನ್ನು ಕಾಯ, ವಾಚ, ಮನಸಾ ತ್ರಿಕರಣ ಶುದ್ಧವಾಗಿ ಅಧ್ಯಾತ್ಮ, ಶಿಕ್ಷಣ ಹಾಗೂ ಸಮಾಜಮುಖಿ ಸೇವೆಗಳಿಗೆ ತೊಡಗಿಸಿಕೊಂಡವರು'' ಎಂದು ಹೇಳಿರುವುದು ಅರ್ಥಪೂರ್ಣವಾಗಿದೆ.

ಆಶಾಜ್ಯೋತಿ :

ಬಸವ ಭಕ್ತಿಯ ಬೀಜವ ಬಿತ್ತಿ ಸತ್ಯದ ನಿಲವ ಬೆಳೆಸುತ್ತಿರುವ ಪೂಜ್ಯ ಶ್ರೀ ಅಕ್ಕ ಅನ್ನಪೂರ್ಣ ತಾಯಿ ಬಸವ ಸೇವಾ ಪ್ರತಿಷ್ಠಾನ ಬೀದರ ಅವರು ಮನದುಂಬಿ ಬರೆಯುತ್ತ ''ಕರುನಾಡಿನ ಕಿರೀಟ ಕಲ್ಯಾಣ ಕ್ರಾಂತಿಯ ಆಡಂಬೊಲ ವಚನ ಸಾಹಿತ್ಯ ಗಂಗೋತ್ರಿ ಎನಿಸಿರುವ ಬೀದರ ಜಿಲ್ಲೆಯ ಮತ್ತೊಂದು ಹೆಮ್ಮೆ ಭಾಲ್ಕಿಯ ಶ್ರೀಮಠ ನಡೆದಾಡುವ ದೇವರೆಂದು ಜನಮನದಲ್ಲಿ ನೆಲೆಸಿರುವ ಪೂಜ್ಯ ಶ್ರೀ ಮ.ಘ.ಚ. ಡಾ. ಚನ್ನಬಸವ ಪಟ್ಟದ್ದೇವರ ಪರಿಶ್ರಮ ಹಾಗೂ ತಪಸ್ಸಿನ ಫಲವಾಗಿ ಬಸವಾದಿ ಶರಣರ ಕ್ರಾಂತಿ ಕಹಳೆಯನ್ನು ಮೊಳಗಿಸುತ್ತಿರುವ ಸಾಂಸ್ಕತಿಕ ಶ್ರೀಮಂತ ಮಠವೆಂದು ಪ್ರಸಿದ್ಧವಾಗಿದೆ. ನಂತರ ಪೂಜ್ಯ ಶ್ರೀ ಮ.ಘ.ಚ. ಡಾ ಬಸವಲಿಂಗಪಟ್ಟದ್ದೇವರ ನೇತೃತ್ವದಲ್ಲಿ ಉನ್ನತೋನ್ನತಿಯ ಶಿಖರವೇರಿರುವ ಶ್ರೀಮಠವು ಬಸವ ಭಕ್ತರ ಅಭಿಮಾನದ ತಾಣ ನಿರ್ಗತಿಕ ಮಕ್ಕಳ ಮಮತೆಯ ಆಶ್ರಯ ಧಾಮ.

ಇದೀಗ ಕನ್ನಡದ ಮಠವೆಂದೆ ಹೆಸರಾದ ಐತಿಹಾಸಿಕ ಒನ್ನಲೆಯ ಭಾಲ್ಕಿಯ ಶ್ರೀಮಠದ ಉತ್ತರಾ ಕಾರಿಯಾಗುವ ಸೌಭಾಗ್ಯ ಪಡೆದಿರುವ ಗುರುಬಸವ ದೇವರ ಪಟ್ಟಾಧಿಕಾರ ನೆರವೇರುತ್ತಿರುವುದು ಬಸವ ಭಕ್ತರಿಗೆಲ್ಲ ಅತೀವ ಆನಂದ ತಂದಿದೆ.

ಪೂಜ್ಯ ಶ್ರೀ ಗುರುಬಸವ ದೇವರು ಕರ್ತೃತ್ವ ಶಕ್ತಿಯ ಕ್ರೀಯಾಶೀಲ ಚೇತನ. ಮಿಗಿಲಾಗಿ ಬಾಲ್ಯದಿಂದಲೇ ಶ್ರೀಮಠದೊಂದಿಗೆ ಬೆಳೆದ ಸಂಸ್ಕಾರವಂತರು. ಮಠದ ಪ್ರಗತಿಯ ಪ್ರತಿ ಘಟ್ಟದಲ್ಲಿಯೂ ತೊಡಗಿಸಿಕೊಂಡು ದುಡಿದವರು. ಅವರಿಗೂ ಮಠಕ್ಕೂ ತಾಯಿ ಮಕ್ಕಳಂಥ ಬಿಚ್ಚಿ ಬೇರಾಗದ ಅವಿನಾಭಾವ ಸಂಬಂಧ ಪ್ರಯುಕ್ತ ಅವರ ಪಟ್ಟಾಧಿಕಾರ ಅತ್ಯಂತ ಅರ್ಥಪೂರ್ಣ ಹೀಗಾಗಿ ಶ್ರೀಯುತರು ಶ್ರೀಮಠದ ಅಭಿವೃದ್ಧಿಯ ಹಾಗೂ ಭಕ್ತಗಣದ ಉದ್ಧಾರದ ಆಶಾಜ್ಯೋತಿ.

ಪೂಜ್ಯ ಶ್ರೀ ಗುರುಬಸವ ದೇವರ ಮುಂದಾಳತ್ವದಲ್ಲಿ ಶ್ರೀಮಠವು ಇನ್ನೂ ಉತ್ತುಂಗಕ್ಕೇರಲಿ. ಬಸವ ತತ್ವಪ್ರಸಾರ ಕಾರ್ಯಗಳು ಸಮರ್ಥವಾಗಿ ನಡೆಯಲೆಂದು ಬಯಸುತ್ತಾ ಆ ಶಕ್ತಿ ಸಾಮರ್ಥ್ಯಗಳನ್ನು ಕರುಣಿಸಲೆಂದು ಗುರು ಬಸವ ತಂದೆಯಲ್ಲಿ ಪ್ರಾರ್ಥಿಸುವೆ'' ಎಂದು ಶುಭ ಹಾರೈಸಿದ್ದಾರೆ.

ಸಹೃದಯಿ:

ಬಸವ ತತ್ವವನ್ನು ಬದುಕಿನ ಭಾಗವಾಗಿಸಿಕೊಂಡ ಬಸವಶ್ರೀ ಸಿದ್ದರಾಮ ಶರಣರು ಬೆಲ್ದಾಳ ಶರಣರ ಅಭಿಪ್ರಾಯದಂತೆ ಭಾಲ್ಕಿ ಹಿರೇಮಠ ಸಂಸ್ಥಾನ ಗುರುಸ್ಥಲಕ್ಕೆ ಸೇರಿದರೂ ನಾಡಿಗೆ ಮಾದರಿ ಪ್ರಾಯವಾದ ಒಂದು ಅಚ್ಚ ಬಸವ ತತ್ವಕ್ಕೆ ಸಮರ್ಪಿತ ಮಠ. ಪೂಜ್ಯ ಶ್ರೀ ಡಾ. ಚನ್ನಬಸವ ಪಟ್ಟದ್ದೇವರು ಬಸವ ತತ್ವವನ್ನು ಮೈಗೂಡಿಸಿಕೊಂಡಿದ್ದವರ ಸಮರ್ಥ ಉತ್ತರಾಧಿಕಾರಿಗಳಾಗಿ ಪೂಜ್ಯ ಶ್ರೀ ಡಾ. ಬಸವಲಿಂಗ ಪಟ್ಟದ್ದೇವರು ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ವಿಕಾಸಕ್ಕೆ ಹಗಲಿರುಳು ಶ್ರಮಿಸಿ ಶ್ರೀಮಠದ ಸಾಂಸ್ಕತಿಕ, ಚಾರಿತ್ರಿಕ ಹಿರಿಮೆ ಹೆಚ್ಚಿಸಿದ್ದಾರೆ. ಅವರು ದೂರ ದೃಷ್ಟಿಯಿಂದಲೆ ಕ್ರಿಯಾಶೀಲರಾದ ಶ್ರಿ ಗುರುಬಸವದೇವರನ್ನು ಉತ್ತರಾ ಧಿಕಾರಿಯಾಗಿ ನೇಮಿಸಿ ಇದೀಗ ಪಟ್ಟಾಧಿಕಾರ ನೆರವೇರಿಸುತ್ತಿರುವುದು ಔಚಿತ್ಯಪೂರ್ಣವಾಗಿದೆ. ಶ್ರೀ ಗುರುಬಸವ ದೇವರು ಅಹಂ ಭೇದ, ಜಾತಿ ಭೇದವಿಲ್ಲದ ಸಹೃದಯಿ, ಸದುವಿನಯಿಯಾಗಿದ್ದಾರೆ. ಶ್ರೀಮಠದ, ಹಿಂದಿನ ಶ್ರೀಗಳ ಆಶೋತ್ತರಕ್ಕೆ ತಕ್ಕಂತೆ ಶ್ರೀ ಗುಬಸವ ದೇವರು ಮನ್ನಡೆದು ಉತ್ತರೋತ್ತರ ಏಳಿಗೆ ಸಾಧಿಸುತ್ತಾರೆಂಬ ಭರವಸೆ ನಮಗಿದೆ'' ಎನ್ನುತ್ತಾರೆ.

ಹೊಸ ಕಾಯಕಲ್ಪ :

ಬಸವ ತತ್ವವನ್ನು ಬದುಕಿನ ಭಾಗವಾಗಿಸಿಕೊಂಡಿರುವ ಪೂಜ್ಯ ಶ್ರೀ ಅಕ್ಕ ಗಂಗಾಬಿಕಾ ಬಸವಗಿರಿ ಬೀದರ ಅವರು ಅಭಿಪ್ರಾಯ ವ್ಯಕ್ತಪಡಿಸುತ್ತ ''ಮಾತಿಗಿಂತ ಕೃತಿ ಮುಖ್ಯ, ಅಕಾರಕ್ಕಿಂತ ಸೇವಾಭಾವ ಮುಖ್ಯ ಎಂದರಿತ ಶ್ರೀ ಗುರುಬಸವ ದೇವರಲ್ಲಿ ಗುರುನಿಷ್ಠೆ, ಸದವಿನಯ ಎದ್ದು ಕಾಣುವ ಗುಣಗಳಾಗಿವೆ. ಸದಾ ಹಸನ್ಮುಖಿಯಾದ ಅವರಲ್ಲಿ ಅಸಾಧ್ಯವಾದದ್ದೂ ಸಾಧಿಸುವ ಛಲಗಾರಿಕೆಯ ಗುಣವಿದೆ. ಅವರಿಂದ ಶ್ರೀಮಠಕ್ಕೆ ಹೊಸ ಕಾಯಕಲ್ಪ ಬರುವಲ್ಲಿ ಅನುಮಾನವಿಲ್ಲ''ವೆಂದು ಹೇಳಿರುವುದು ಔಚಿತ್ಯಪೂರ್ಣವಾಗಿದೆ.

ಅಹೋಭಾಗ್ಯ :

ಜನನಾಯಕರಾದ ಅಖಿಲ ಭಾರತದ ವೀರಶೈವ ಮಹಾಸಭೆ ಪ್ರಧಾನ ಕಾರ್ಯದರ್ಶಿಗಳು ಹಾಗೂ ಭಾಲ್ಕಿಯ ಜನಪರ ಶಾಸಕರಾದ ಶ್ರೀ ಈಶ್ವರ ಖಂಡ್ರೆಯವರು ಶ್ರೀ ಗುರುಬಸವದೇವರ ಕುರಿತು ಹೇಳುತ್ತ ಭಾಲ್ಕಿ ಹಿರೇಮಠ ಸಂಸ್ಥಾನ ಇತಿಹಾಸ ಪ್ರಸಿದ್ಧವಾಗಿದೆ. ಅದಕ್ಕೆ ಕಾರಣ ನಡೆದಾಡುವ ದೇವರಾದ ಪೂಜ್ಯ ಶ್ರೀ ಡಾ ಚನ್ನಬಸವಪಟ್ಟದ್ದೇವರು. 12ನೇಯ ಶತಮಾನದಲ್ಲಿ ಬಸವಾದಿ ಶರಣರು ಸಮಾಜೋಧಾರ್ಮಿಕ ಕ್ರಾಂತಿ ಮಾಡಿದರು. ಸ್ತ್ರೀ ಸ್ವಾತಂತ್ರ್ಯಕ್ಕಾಗಿ ಹೋರಾಡಿದರು. ಸಂಸ್ಕೃತ ಪ್ರಾಬಲ್ಯದ ಮಧ್ಯ ಕನ್ನಡ ಕಟ್ಟಿ ಬೆಳೆಸಿದರೆ ಈ ಕಾರ್ಯಗಳನ್ನು ಕಳೆದ ಶತಮಾನದಲ್ಲಿ ಪೂಜ್ಯ ಶ್ರೀ ಡಾ. ಚನ್ನಬಸವಪಟ್ಟದ್ದೇವರು ಕಾರ್ಯರೂಪಕ್ಕೆ ತಂದವರು. ಕನ್ನಡ ಉಳಿಸಿ ಬೆಳೆಸಲು ಅಹರ್ನಿಶ ಹೋರಾಡಿದರು. ಅವರ ಹೆಜ್ಜೆಯಲ್ಲಿ ಹೆಜ್ಜೆ ಹಾಕುತ್ತಿರುವ ಪೂಜ್ಯ ಶ್ರೀ ಡಾ ಬಸವಲಿಂಗ ಪಟ್ಟದ್ದೇವರ ಶೈಕ್ಷಣಿಕ ಪ್ರಗತಿ ವೈಚಾರಿಕ ಜನ ಜಾಗೃತಿಗೆ ತೊಡಗಿಸಿಕೊಂಡರು. ಅವರಿಗೆ ಹೆಗಲೆಣೆಯಾಗಿ ನಿಂತ ಕ್ರೀಯಾಶೀಲರೂ ಸಮರ್ಥ ಉತ್ತರಾಧಿಕಾರಿಗಳಾದ ಶ್ರೀ ಗುರುಬಸವ ದೇವರು ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದೆಂಬಂತೆ ಸರ್ವಾಂಗೀಣ ವಿಕಾಸಕ್ಕೆ ಶ್ರಮಿಸುತ್ತಿರುವುದು ಅನನ್ಯವಾಗಿದೆ. ಅವರ ಪಟ್ಟಾಕಾರ ಮಹೋತ್ಸವ ಐತಿಹಾಸಿಕವಾದದ್ದು. ನಮ್ಮ ತಂದೆಯವರು ಪೂಜ್ಯ ಶ್ರೀ ಡಾ ಬಸವಲಿಂಗ ಪಟ್ಟದ್ದೇವರ ಪಟ್ಟಾಭಿಷೇಕ ನೆರವೇರಿಸಿದಂತೆ ಈಗ ನಾವು ಈ ಸಮಾರಂಭದ ಮಣಿಹ ಹೊತ್ತು ಯಶಸ್ವಿಗೊಳಿಸಲು ಅಣಿಯಾಗಿರುವುದು ಅತ್ಯಂತ ಅಹೋಭಾಗ್ಯದ ಸಂಗತಿಯೆಂದು ಭಾವಿಸಿದ್ದೇವೆ ಎಂದು ಹೇಳುತ್ತಾರೆ.

ಲೋಕ ಜ್ಞಾನ :



ಜಾನಪದ ವಿದ್ವಾಂಸರೂ, ಹಿರಿಯ ಸಾಹಿತಿಗಳೂ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಗೊ. ರು. ಚನ್ನಬಸಪ್ಪನವರು ಪೂಜ್ಯ ಶ್ರೀ ಗುರುಬಸವ ದೇವರ ಕುರಿತು ಅಭಿಮತ ವ್ಯಕ್ತಪಡಿಸುತ್ತ ''ಪೂಜ್ಯ ಶ್ರೀ ಗುರುಬಸವ ದೇವರು ಸಜ್ಜನ, ಸಾತ್ವಿಕ ಸ್ವಭಾವದ ಲೋಕ ಜ್ಞಾನವುಳ್ಳ ವಿಚಾರಶೀಲರು. ಮಹೋನ್ನತ ಸ್ಥಳದಲ್ಲಿ ಒಳ್ಳೆಯವರ ಆಯ್ಕೆಯಾಗುವುದಕ್ಕೆ ಇವರ ನಿದರ್ಶನ. ಸದಾ ಜನಸಂಪರ್ಕ ಇಟ್ಟುಕೊಳ್ಳುವ ಕೌಶಲ್ಯ ಹೊಂದಿರುವ ಇವರು ಒಳ್ಳೆಯ ಕೆಲಸ ಮಾಡುವ ಭರವಸೆಗಳಿವೆ. ಸಾತ್ವಿಕ ಸಮಾಜ ಕಟ್ಟಲು ಇವರ ಸೇವೆ ಅಗತ್ಯವಾಗಿದ್ದು, ಪೂಜ್ಯ ಶ್ರೀ ಗುರುಬಸವ ದೇವರಿಗೆ ಒಳ್ಳೆಯದಾಗಲಿ'' ಎಂದು ಶುಭ ಹಾರೈಸಿದ್ದಾರೆ.

ಸತ್ಪರಂಪರೆ:

ಕಲ್ಯಾಣ ಕರ್ನಾಟಕದ ಜನಮಾನಸದ ಸಾಂಸ್ಕೃತಿಕ ಬದುಕಿಗೆ ಪ್ರೇರಕರಾದ ಹಿರಿಯ ಸಾಹಿತಿ ಪ್ರೊ ವೀರೇಂದ್ರ ಸಿಂಪಿಯವರ ಭಾವವೆಂದರೆ ''ಕರ್ನಾಟಕದ ಎಲ್ಲಾ ಮಠಗಳಲ್ಲಿಯೇ ಭಾಲ್ಕಿ ಹಿರೇಮಠವ ವೈಶಿಷ್ಟ್ಯಪೂರ್ಣವಾಗಿದೆ. ಪೂಜ್ಯ ಶ್ರೀ ಡಾ ಚನ್ನಬಸವಪಟ್ಟದ್ದೇವರು ಕಷ್ಟಪಟ್ಟು ಬೀದರ ಜಿಲ್ಲೆಯ ಪುನರುತ್ಥಾನಕ್ಕೆ ಕಾರಣರಾದರು. ಕನ್ನಡ ಬಸವಣ್ಣ ಅವರ ಎರಡು ಕಣ್ಣುಗಳಾಗಿದ್ದವು. ಅವರ ಉತ್ತರಾಕಾರಿ ಪೂಜ್ಯ

ಶ್ರೀ ಡಾ ಬಸವಲಿಂಗ ಪಟ್ಟದ್ದೇವರು ಒಂದು ತೂಕ ಹೆಚ್ಚಾಗಿಯೇ ಜಿಲ್ಲೆಯಾದ್ಯಂತ ವಿದ್ಯಾಲಯಗಳ ಒಂದು ಜಾಲವನ್ನೇ ನಿರ್ಮಿಸಿರುವರು. ಹಾಗೆಯೇ ಅವರ ಸಮರ್ಥ ಉತ್ತರಾಧಿಕಾರಿಗಳು ಸದ್ಯಕ್ಕೆ ಪಟ್ಟಾಧಿಕಾರಕ್ಕೆ ಬರಲಿರುವ ಪೂಜ್ಯ ಶ್ರೀ ಗುರುಬಸವ ದೇವರು ಹಿರೇಮಠ ಸಂಸ್ಥಾನದ ಸತ್ಪರಂಪರೆಯನ್ನು ಮುಂದುವರೆಸಲಿದ್ದಾರೆ. ವಿದ್ಯಾಲಯಗಳ ಸ್ಥಾಪನೆ ಜೊತೆಗೆ ಬಡವರ, ದಲಿತರ ಪರಕಾಳಜಿ ಕಂಡುಬರುತ್ತಿದ್ದು ಅವರಲ್ಲಿ ನಾಡು ಬಹುದೊಡ್ಡ ನಿರೀಕ್ಷೆಯನ್ನಿರಿಸಿದೆ'' ಎಂದು ನುಡಿಯುತ್ತಾರೆ.

ತೊತ್ತಿನ ತೊತ್ತು :

ಪುಣ್ಯಕೋಟಿಯಂದೆ ಕರೆಸಿಕೊಳ್ಳುವ ಕನ್ನಡದ ಕಟ್ಟಾಳು ಪಂಚಾಕ್ಷರಿ ಪುಣ್ಯಶೆಟ್ಟಿಯವರ ಅನಿಸಿಕೆ ಎಂದರೆ ''ಪೂಜ್ಯ ಶ್ರಿ ಗುರುಬಸವದೇವರನ್ನು ನಾನು ಅವರ ಬಾಲ್ಯದಿಂದಲೂ ತೀರಾ ಸಮೀಪದಿಂದ ಬಲ್ಲೆನು. ಅವರು ಸದಾ ಕಾಯಕದಲ್ಲಿ ತಲ್ಲೀನರಾಗಿರುತ್ತಾರೆ. ಯಾವುದೇ ಸಣ್ಣ ಕೆಲಸವಿದ್ದರು ಮನಮುಟ್ಟಿ ಮಾಡುತ್ತಾರೆ. ಅವರು ಅಪ್ಪಟ ಸಾತ್ವಿಕ ಜೀವಿಗಳು. ಆತ್ಮಸ್ತುತಿ ಮಾಡಿಕೊಳ್ಳದವರು ಸದ್ಗುಣಿಗಳು ಯಾರೇ ಇರಲಿ ಅವರನ್ನು ಗೌರವಿಸುತ್ತಾರೆ. ಅಧಿಕಾರದ ದರ್ಪ ಅವರಿಂದ ಎಷ್ಟೋ ಮೈಲಿ ದೂರವಿದೆ. ಜಾತಿಹಿಡಿದು ಸೂತಕವನರಸುವ ಸ್ವಾಮಿಗಳಂತಲ್ಲ. ಶಿವಶರಣರ ತೊತ್ತಿನ ತೊತ್ತೆಂಬ ಭಾವುಳ್ಳವರು. ಇವರ ಈ ಸದ್ಗುಣವನ್ನು ನಾಡಿನ ಎಲ್ಲಾ ಪೀಠಾಧಿಪತಿಗಳು ಬಲ್ಲರು. ಭಾಲ್ಕಿ ಹಿರೇಮಠ ಸಂಸ್ಥಾನ ಅವರಿಗೆ ಪೀಠಾರೋಹಣ ಮಾಡುತ್ತಿರುವುದು ನಮ್ಮೆಲ್ಲರಿಗೂ ಸಂತಸ ಉಂಟುಮಾಡಿದೆ.'' ಎಂದಿರುವರು.

ಸಮರ್ಥ ಸದ್ಗುರು

ಶ್ರೀಮಠದ ಆಪ್ತರು, ಭಾಲ್ಕಿ ಮತಕ್ಷೇತ್ರದ ಮಾಜಿ ಶಾಸಕರಾದ ಪ್ರಕಾಶ ಖಂಡ್ರೆಯವರು ಅಭಿಮತ ವ್ಯಕ್ತಪಡಿಸುತ್ತಾ ''ಭಾಲ್ಕಿ ಹಿರೇಮಠ ಸಂಸ್ಥಾನ ಭಾಲ್ಕಿಯ ಪೂಜ್ಯ ಅಪ್ಪಗಳವರ ಭಕ್ತಿಯ ಒಡನಾಟದಲ್ಲಿ ಶ್ರೀಮಠದ ಎಲ್ಲ ವಿಧಾಯಕ ಕಾರ್ಯಗಳ ವಿಕಾಸಕ್ಕಾಗಿ ಶ್ರಮಿಸುವ ಸದಾವಕಾಶ ನನಗೆ ದೊರೆತಿರುವುದು ನನ್ನ ಸೌಭಾಗ್ಯ. ಹಿರೇಮಠ ಸಂಸ್ಥಾನದ ಎಲ್ಲ ಕಾರ್ಯಗಳಲ್ಲಿ ಪೂಜ್ಯ ಡಾ. ಬಸವಲಿಂಗ ಪಟ್ಟದ್ದೇವರ ದಿವ್ಯ ಮಾರ್ಗದರ್ಶನದಲ್ಲಿ 25 ವರ್ಷಗಳಿಂದ ನಿಷ್ಠೆಯಿಂದ ಸಕ್ರಿಯವಾಗಿ ದುಡಿದವರು ಪೂಜ್ಯ ಶ್ರೀ ಗುರುಬಸವದೇವರು. ಶ್ರೀಮಠಕ್ಕೆ ಮತ್ತು ಅಪಾರ ಶಿಷ್ಯ ಬಳಗಕ್ಕೆ ಇವರು ಬಹಳ ಬೇಕಾದವರಾಗಿ ಎಲ್ಲರ ಪ್ರೀತಿ, ವಿಶ್ವಾಸ, ಗೌರವ ಗಳಿಸಿದ್ದಾರೆ. ಅವರು ಈ ಮಠಕ್ಕೆ ಪಟ್ಟಾಧಿಕಾರಿಯಾಗಿ ಅಧಿಕಾರ ವಹಿಸಿಕೊಳ್ಳುತ್ತಿರುವುದು ಆರೋಗ್ಯಕರ ಬೆಳವಣಿಗೆಯಾಗಿದೆ. ಇವರ ಸಾರಥ್ಯದಲ್ಲಿ ಭಾಲ್ಕಿಯ ಶ್ರೀಮಠವು ಭವಿಷ್ಯದಲ್ಲಿ ನಾಡಿನ ಮಠಗಳಲ್ಲೇ ಮುಂಚೂಣಿ ಎನಿಸುವ ರೀತಿಯಲ್ಲಿ ಬೆಳೆಯುವ ಸಾಧ್ಯತೆಗಳು ವಿಪುಲವಾಗಿವೆ. ಅವರೊಬ್ಬ ಸಮರ್ಥ ಸದ್ಗುರು ಆಗುವಲ್ಲಿ ಯಾವುದೇ ಅನುಮಾನ ವಿಲ್ಲ'' ವೆಂದು ನುಡಿದರು.

ಕಾರ್ಯವೇ ಇವರಿಗೆ ಪ್ರಾಣಜೀವಾಳ

ಈ ಭಾಗದ ಹಿರಿಯ ಸಾಹಿತಿಗಳಾದ ಡಾ.ಜಿ.ಬಿ.ವಿಸಾಜಿ, ಭಾಲ್ಕಿ ಅಭಿಪ್ರಾಯ ಪಡುತ್ತಾ ''ಪರಮಪೂಜ್ಯ ಡಾ.ಚನ್ನಬಸವ ಪಟ್ಟದ್ದೇವರಾಗಲಿ, ಪೂಜ್ಯ ಡಾ.ಬಸವಲಿಂಗ ಪಟ್ಟದ್ದೇವರಾಗಲಿ, ಪೂಜ್ಯ ಗುರುಬಸವದೇವರಾಲಿ ಪಟ್ಟದ್ದೇವರಾಗಬೇಕೆಂದು ಬಯಸಿದವರಲ್ಲ, ಕಾಲ, ಭಾಲ್ಕಿ ಹಿರೇಮಠ, ಭಕ್ತರ ಸದಿಚ್ಛೆ ಆಯ್ಕೆ ಮಾಡಿದೆ. ಪೂಜ್ಯ ಗುರುಬಸವದೇವರಲ್ಲಿ ಆಡಳಿತ ನೈಪುಣ್ಯವಿದೆ. ಹಿಡಿದಕಾರ್ಯವೇ ಅವರಿಗೆ ಪ್ರಾಣ ಜೀವಾಳವಾಗುತ್ತದೆ. ಆ ಸಮಯದಲ್ಲಿ ಊಟ, ನಿದ್ರೆಯ ಕಾಳಜಿಯೂ ಇರುವುದಿಲ್ಲ, ಅವರು ಪೂಜ್ಯ ಬಸವಲಿಂಗ ಪಟ್ಟದ್ದೇವರ ಮಾರ್ಗದರ್ಶನದಲ್ಲಿ ಪ್ರಾಯೋಗಿಕವಾಗಿ ಬೆಳೆದಿದ್ದಾರೆ. ದೇಶದ ಮಠಾಧೀಶರ, ಕನ್ನಡ ಸಮ್ಮೇಳನಗಳ, ಪುಸ್ತಕ ಭಂಡಾರಗಳ, ಶಿಕ್ಷಣಕ್ಷೇತ್ರಗಳ, ದಾಸೋಹನಿಲಯಗಳ ವೀಕ್ಷಣೆ, ಅಧ್ಯಯನ ಮಾಡಿದ್ದಾರೆ. ಯಾವ ಕಾರ್ಯ ಶ್ರೇಷ್ಠ ಯಾವ ಮಾತು ಶ್ರೇಷ್ಠ ಎನ್ನುವ ಅರಿವು ಅವರಲ್ಲಿ ಜಾಗೃತವಾಗಿರುವುದು ನನಗೆ ಆಶ್ಚರ್ಯ ಮೂಡಿಸಿದೆ. ಪೂಜ್ಯ ಗುರುಬಸವದೇವರು ಪಟ್ಟಾಕಾರ ವಹಿಸಿಕೊಂಡು ಹಿಂದಿನ ಪರಂಪರೆಯನ್ನು ಉಳಿಸಿಕೊಂಡು, ಬೆಳೆಯಿಸುವುದರಲ್ಲಿ ನನಗೆ ಸಂಶಯವಿಲ್ಲ'' ಯೆಂದು ನುಡಿದರು.

ಸಮತೆ-ಮಮತೆಗಳ ಜೋಡಿ :



ನಾಡಿನ ಖ್ಯಾತ ಚಿಂತಕರಾದ ಚಂದ್ರಶೇಖರ ವಸ್ತದ ಗದಗ ಅವರ ಅಭಿಮತವೆಂದರೆ, ಸರಳತೆ, ಸದುನುಡಿ ಸವಿನಯಗಳ ಸಾಧಕ ಶ್ರೀ ಗುರುಬಸವದೇವರು ಮೊದಲ ನೋಟಕ್ಕೆ ಹೃದಯಕ್ಕೆ ಹತ್ತಿರದವರಾಗುತ್ತಾರೆ. ಭಾಲ್ಕಿಯ ಹಿರೇಮಠ ಸಂಸ್ಥಾನದ ಡಾ.ಚನ್ನಬಸವ ಪಟ್ಟದ್ದೇವರು ಹಾಗೂ ಡಾ.ಬಸವಲಿಂಗ ಪಟ್ಟದ್ದೇವರು ಬಸವಬೆಳಗಿನಲ್ಲಿ ಜನಸಮುದಾಯವನ್ನು ಮುನ್ನಡೆಸಿದವರು. ಅದೇ ಪಥದಲ್ಲಿ ಮುನ್ನಡೆಯುತ್ತಿರುವ ಶ್ರೀ ಗುರುಬಸವದೇವರು ಯಶಸ್ವಿಯಾಗುತ್ತಾರೆಂಬ ಸ್ಪಷ್ಟ ಸೂಚನೆ ಅವರ ವ್ಯಕ್ತಿತ್ವದಲ್ಲೇ ಗೋಚರವಾಗುತ್ತದೆ. ಬಸವಾದಿ ಪ್ರಮಥರು ಕರುಣಿಸಿದ ಸಮತೆ, ಮಮತೆಗಳ ಜೋಡಿ ದೀವಿಗೆಗಳ ಬೆಳಗಿನಲ್ಲಿ ಇವರ ದಿವ್ಯಪಯಣ ಸಾಗಲೆಂದು ಶುಭ ಕೋರಿದ್ದಾರೆ.

ಹೀಗೆ ಹಲವು ಪೂಜ್ಯರು, ಹಿರಿಯರು ವ್ಯಕ್ತಪಡಿಸಿರುವ ಅಭಿಪ್ರಾಯಗಳು ಪೂಜ್ಯ ಗುರುಬಸವ ದೇವರ ಸಮಗ್ರ ವ್ಯಕ್ತಿತ್ವಕ್ಕೆ ಕನ್ನಡಿ ಹಿಡಿದಂತಾಗಿದೆ ಅವರಿಂದ ಈ ನಾಡಿಗೆ ಅಮೂಲ್ಯವಾದ ಸೇವೆ ಸಲ್ಲುವಂತಾಗಲೆಂದು ಶುಭ ಹಾರೈಸುವೆ.

ಸಾತ್ವಿಕ ಕನಸಿಗ:

ನ್ಯಾಯ ನಿಷ್ಠುರರು, ಸ್ವತಂತ್ರ ವಿಚಾರಶೀಲರೂ ಆದ ವಿಶ್ವಾರಾಧ್ಯ ಸತ್ಯಂಪೇಟೆ ಅಧ್ಯಕ್ಷರು ಬಸವ ಮಾರ್ಗ ಪ್ರತಿಷ್ಠಾನ ಸತ್ಯಂಪೇಟೆ, ಶಹಾಪೂರ ಜಿಲ್ಲೆ, ಯಾದಗೀರ ಅವರ ಮನದಿಂಗಿತವೆಂದರೆ '' ಶ್ರೀ ಗುರುಬಸವ ದೇವರೆಂದರೆ ಸದುವಿನಯವೆ ಮೈವೆತ್ತ ಮೂರ್ತಿ, ಅಹಂಕಾರ ಅಳಿಯಲೆತ್ನಿಸುವ ಹೃದಯ. ಇವನಾರವನೆಂದು ತುಚ್ಛೀಕರಿಸದ ಮನ, ಎಲ್ಲರನ್ನು ತಬ್ಬಿಕೊಳ್ಳುವ ತವಕ, ಶರಣರ ವಚನ ಸಾಹಿತ್ಯದಲ್ಲಿ ವ್ಯಕ್ತಿತ್ವ ಕಟ್ಟಿಕೊಳ್ಳುವ ಸಾತ್ವಿಕ ಕನಸಿಗ''ನೆಂದು ನುಡಿವರು.

ಕನ್ನಡತ್ವ- ಬಸವತತ್ವ :

ಕ್ರಿಯಾಶೀಲ, ಸಂಘಟನಾಶೀಲರೂ, ಬೀದರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಸುರೇಶ ಚನಶೆಟ್ಟಿ ಅವರು ಅಭಿಪ್ರಾಯ ವ್ಯಕ್ತಪಡಿಸುತ್ತ ''ಸದಾ ಪ್ರಗತಿಯ ಆಲೋಚನೆ, ಬಸವ ತತ್ವದ ಪ್ರಸಾರ ಮುಖ್ಯ ಧ್ಯೇಯವಾಗಿಟ್ಟುಕೊಂಡಿರುವ ಪೂಜ್ಯ ಶ್ರೀ ಗುರುಬಸವ ದೇವರು ಅಭಿವೃದ್ಧಿಯ ಚಿಂತಕರು. ಕನ್ನಡತ್ವ- ಬಸವತತ್ವ ಜನಮಾನಸದ ಉಸಿರಾಗಬೇಕೆಂದು ಹಂಬಲಿಸುವ ಶ್ರೀಗಳ ಪಟ್ಟಾಧಿಕಾರ ಈ ನೆಲದ ಸುಕೃತ ಪುಣ್ಯ'' ಎಂದಿದ್ದಾರೆ.

ಪ್ರಗತಿಪರ ವಿಚಾರಶೀಲ:

ಬಂಡಾಯ ಸಾಹಿತಿ, ಭಾರತ ಜ್ಞಾನ ವಿಜ್ಞಾನ ಸಮಿತಿಯ ರಾಜ್ಯ ಉಪಾಧ್ಯಕ್ಷರಾದ ಶ್ರೀ ಎಂ. ಎಸ್. ಮನೋಹರರವರು ಅಭಿಪ್ರಾಯ ವ್ಯಕ್ತ ಪಡಿಸುತ್ತ '' ಪೂಜ್ಯ ಶ್ರೀ ಗುರುಬಸವದೇವರು ಕ್ರಿಯಾಶೀಲರು, ಸರಳ ಸಜ್ಜನಿಕೆಗೆ ಹೆಸರಾದವರು, ಪ್ರಗತಿಪರ ವಿಚಾರಶೀಲರೂ ಆಗಿದ್ದಾರೆ. ಅವರಿಂದ ಭಾಲ್ಕಿ ಹಿರೇಮಠ ಸಂಸ್ಥಾನ ಬಸವ ತತ್ವ ವಿಕಾಸದಲ್ಲಿ ಹೊಸ ಮೈಲಿಗಲ್ಲು ಸ್ಥಾಪಿಸುತ್ತಾರೆಂಬ ಭರವಸೆಯಿದೆ''. ಎಂದು ನುಡಿಯುತ್ತಾರೆ.

ಸಂವೇದನಾ ಶೀಲತೆ

ಕನ್ನಡ ಹೋರಾಟಗಾರರಾದ ಶ್ರೀ ಶಶಿಧರ ಕೊಸಂಬೆ ಯವರು ಅಭಿಪ್ರಾಯ ವ್ಯಕ್ತಪಡಿಸುತ್ತಾ ಪೂಜ್ಯಶ್ರೀ ಗುರುಬಸವದೇವರು, ಬೇರೆಯವರ ನೋವಿನಲ್ಲಿ ಸಹಭಾಗಿತ್ವವನ್ನು ಪಡೆಯುವ ಪರರನೋವು ತನ್ನನೋವುವೆಂದು ಪರಿಗಣಿಸುತ್ತಾ, ಇನ್ನೊಬ್ಬರ ಕಷ್ಟಕ್ಕೆ ಸಹಾಯ ಮಾಡುವ ಸಂವೆದನಾ ಶೀಲತೆ ಹೊಂದಿರುವುರು ಶ್ರೀಮಠಕ್ಕೆ ಇವರಿಂದ ಹೆಚ್ಚಿನ ಸೇವೆ ಸಲ್ಲುತ್ತಲೆಂದು ಆಪೇಕ್ಷಿಸಿದ್ದೇನೆ.

ಪೂಜ್ಯ ಶ್ರೀ ಗುರುಬಸವದೇವರು, ಡಾ.ಬಸವಲಿಂಗ ಪಟ್ಟಾಧ್ಯಕ್ಷರ ಸಮರ್ಥ ಉತ್ತರಾಧಿಕಾರಿಗಳು. ಇವರ ಗುರುಗಳು ಪಾಂಡಿತ್ಯದಲ್ಲಿ ಹಾಗೂ ಬಸವತತ್ತ್ವ ಪ್ರಸಾರದಲ್ಲಿ ಮುಂದಿದ್ದರೆ, ಅವುಗಳನ್ನು ಉಳಿಸುವಲ್ಲಿ ಬೆಳೆಸುವಲ್ಲಿ ದೇವರು ಮುಂದಿದ್ದಾರೆ. ಸರಳ, ಸಾತ್ವಿಕ, ರಚನಾತ್ಮಕ ಮನೋಭಾವದ ಕ್ರಿಯಾಶೀಲ ಯತಿಗಳಿವರು. ಧಾರವಾಡದ ಪೂಜ್ಯ ಮೃತ್ಯುಂಜಯ ಅಪ್ಪಗಳಿಗೆ ಪೂಜ್ಯ ಮಹಾಂತಪ್ಪಗಳಿದ್ದಂತೆ, ಇಲಕಲ್ಲದ ಪೂಜ್ಯ ಮಹಾಂತಪ್ಪಗಳಿಗೆ ಪೂಜ್ಯ ಗುರುಮಹಾಂತ ಶ್ರೀಗಳಿದ್ದಂತೆ. ಪೂಜ್ಯ ಡಾ. ಬಸವಲಿಂಗ ಪಟ್ಟಾಧ್ಯಕ್ಷರಿಗೆ ಗುರುಬಸವ ದೇವರು ಇದ್ದಾರೆ ಎಂದರೆ ಅತಿಶಯೋಕ್ತಿಯಾಗದು. ಪೂಜ್ಯ ಪಟ್ಟಾಧ್ಯಕ್ಷರು ಕರಡ್ಯಾಳ ಗುರುಕುಲವನ್ನು ಸ್ಥಾಪಿಸಿ-ಬೆಳೆಸಿದುದರ ಹಿಂದೆ ,ಕಳೆದ ವರ್ಷ ಮಹಾರಾಷ್ಟ್ರದ ೩೬ ಜಿಲ್ಲೆಗಳಲ್ಲಿ ಸಂಚರಿಸಿ ಬಸವತತ್ತ್ವ ಪ್ರಚಾರ-ಪ್ರಸಾರ ಯಾತ್ರೆಗೈದುದರ ಹಿಂದೆ, ಭಾಲ್ಕಿ ಸಂಸ್ಥಾನದಿಂದ ಪ್ರಕಟಗೊಳ್ಳುವ ಮರಾಠಿ-ಕನ್ನಡ ಬಸವಾದಿ ಪ್ರಮಥರ ಶರಣಸಾಹಿತ್ಯ ಪ್ರಕಟನೆಯ ಹಿಂದೆ, ಒಟ್ಟಿನಲ್ಲಿ ಹಿರೇಮಠ ಸಂಸ್ಥಾನದ ಭೌತಿಕ ಹಾಗೂ ಬೌದ್ಧಿಕ ಬೆಳವಣಿಗೆಯಾಗುವಲ್ಲಿ ಗುರುಬಸವದೇವರ ಪಾತ್ರ ಅನನ್ಯ, ಅನುಪಮ. ಗಡಿಭಾಗದಲ್ಲಿ ಕನ್ನಡದ ಸೇವೆ ಹಾಗೂ ಬಸವಾದಿ ಪ್ರಮಥರ ತತ್ವ ಪ್ರಚಾರದ ಸೌಧವನ್ನು ಶತಾಯುಷಿ ಪೂಜ್ಯ ಲಿಂ. ಡಾ.ಚೆನ್ನಬಸವ ಪಟ್ಟಾಧ್ಯಕ್ಷರು ಕಟ್ಟಿದರೆ, ಪೂಜ್ಯ ಡಾ.ಬಸವಲಿಂಗ ಪಟ್ಟಾಧ್ಯಕ್ಷರು ಶ್ರೀ ಗುರುಬಸವದೇವರನ್ನು ಉತ್ತರಾಧಿಕಾರಿ ಮಾಡಿಕೊಂಡುದುದು ಗೋಪುರ ಕಟ್ಟಿ ಕಳಸವಿಟ್ಟಂತೆ ಆಗಿದೆ.

ಪೂಜ್ಯ ಶ್ರೀ ಜಗದ್ಗುರು, ಡಾ|| ಸಿದ್ಧಲಿಂಗ ಮಹಾಸ್ವಾಮಿಗಳು
ಜಗದ್ಗುರು ಶ್ರೀ ತೋಂಟದಾರ್ಯ ಮಠ ಡಂಬಳ ಗದಗ

ಹಿರೇಮಠ ಸಂಸ್ಥಾನ ಭಾಲ್ಕಿ